ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

SHRIDEVI EDUCATION

ಮಾಸಪತ್ರಿಕೆ
ಸಂಪುಟ 3, ಸಂಚಿಕೆ 9, ಜುಲೈ 2025

SHRIDEVI ANTARANGA
Monthly Magazine




ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್   ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್   ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್   ಇಂಗ್ಲಿಷ್ ಆವೃತ್ತಿ ಸಂಪಾದಕರು: ಕೃಷ್ಣ ವಿ.



**ಸಂಪಾದಕರ ಅಂತರಂಗ**

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ಸಾರ್ವತ್ರಿಕ ಜನಗಣತಿ ಮತ್ತು ಜಾತಿ ಸಮೀಕ್ಷೆ



ಭಾರತದಲ್ಲಿ 2026 ಅಕ್ಟೋಬರ್ ತಿಂಗಳಿಂದ ಜಾತಿ ಜನಗಣತಿ ಪ್ರಾರಂಭವಾಗುತ್ತದೆ. 2027ಕ್ಕೆ ಅದರ ಫಲಿತಾಂಶವನ್ನು ನಿರೀಕ್ಷೆ ಮಾಡಬಹುದು. ಭಾರತದಲ್ಲಿ ಬ್ರಿಟಿಷ್‌ರ ಆಳ್ವಿಕೆಯ ಸಂದರ್ಭದಲ್ಲಿ ಅಂದರೆ 1872ರಲ್ಲಿ ಲಾರ್ಡ್ ರಿಪ್ಪನ್ ಜನಗಣತಿ ಪ್ರಾರಂಭ ಮಾಡಬೇಕು ಎಂದು ನಿರ್ಧಾರ ಮಾಡಿದ್ದನು. ವಾಸ್ತವವಾಗಿ 1882ರಲ್ಲಿ ಭಾರತದಲ್ಲಿ ಮೊದಲ ಜನಗಣತಿ ಕಾರ್ಯ ಆರಂಭವಾಯಿತು. ಈ ತನಕ ಭಾರತದಲ್ಲಿ 16 ಜನಗಣತಿ ಕಾರ್ಯಗಳು ನಡೆದಿವೆ. ಸ್ವಾತಂತ್ರ್ಯಾನಂತರ 8 ಜನಗಣತಿ ಕಾರ್ಯಗಳು ನಡೆದಿವೆ. ವಾಸ್ತವವಾಗಿ ಭಾರತದಲ್ಲಿ 2021ರಲ್ಲಿ ಈ ಜನಗಣತಿ ಕಾರ್ಯ ನಡೆಯಬೇಕಾಗಿತ್ತು. ಆದರೆ ಕೊರೊನಾ ಸಾಂಕ್ರಾಮಿಕ ಕಾಯಿಲೆಯಿಂದಾಗಿ ಅದು ಮುಂದೂಟಲ್ಪಟ್ಟಿತ್ತು.

ತನ್ನಲ್ಲಿರುವ ಜನಸಂಖ್ಯೆ, ಅದರ ಭೌಗೋಳಿಕ ವಿತರಣೆಯ ವಿಷಯದಲ್ಲಿ ದೇಶಕ್ಕೆ ಸಾರ್ವತ್ರಿಕ ಜನಗಣತಿಯು ಅತಿ ಮುಖ್ಯವಾದ ಆಕರವಾಗಿರುತ್ತದೆ. ಜನಗಣತಿಯು ಅಂಕಿ,ಅಂಶಗಳ ಒಂದು ದೊಂಬರಾಟವಲ್ಲ. ಅದು ಆ ದೇಶದ ಜನಸಾಂದ್ರತೆಯ ಸಾಂಖ್ಯಿಕ ವಿವರದ ಜೊತೆಗೆ, ಆರ್ಥಿಕ ಮತ್ತು ಸಾಮಾಜಿಕ ವಾಸ್ತವತೆಗಳನ್ನು ತೋರಿಸುವ ಕೈಗನ್ನಡಿಯಾಗಿರುತ್ತದೆ ಹಾಗೂ ಮುಂದಿನ ಅಭಿವೃದ್ಧಿಯ ದೃಷ್ಟಿಯಿಂದ ಆಡಳಿತಾತ್ಮಕ ಕಾರ್ಯನೀತಿಯನ್ನು ರೂಪಿಸಲು ನೀತಿನಿರೂಪಕರಿಗೆ ಸಹಾಯವನ್ನು ಮಾಡುತ್ತದೆ. ವೈವಿಧ್ಯಪೂರ್ಣವೂ, ಶ್ರೇಣೀಕೃತವೂ ಆಗಿರುವ ನಮ್ಮ ದೇಶದಲ್ಲಿ, ಜನಗಣತಿಯು ಸಾಮಾಜಿಕ ಮತ್ತು ಆರ್ಥಿಕಸ್ಥಿತಿ, ಪ್ರಜೆಗಳ ವಯೋಮಾನ, ಲಿಂಗಾಧಾರಿತ ಜನಸಂಖ್ಯೆ, ಸಾಕ್ಷರತೆ ಹಾಗೂ ಜನರ ವಿದ್ಯಾರ್ಹತೆ, ಯುವಜನಾಂಗದಲ್ಲಿರುವ ನಿರುದ್ಯೋಗದ ಪ್ರಮಾಣ ಮೊದಲಾದವುಗಳ ಬಗೆಗೆ ಅಂಕಿಅಂಶಗಳನ್ನು ಒದಗಿಸುವ ಮೂಲಕ ರಾಷ್ಟ್ರವನ್ನು ಕಟ್ಟುವ, ಆರ್ಥಿಕ ಯೋಜನೆಗಳನ್ನು ರೂಪಿಸುವ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸುವ ಕಾರ್ಯಗಳಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಇದು ಒದಗಿಸುವ ದತ್ತಾಂಶಗಳನ್ನು ಬಳಸಿಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗಾರಿಕೆಗಳಿಗೆ ಅಗತ್ಯವಾದ ಮೂಲಸೌಕರ್ಯಗಳ ಅಭಿವೃದ್ಧಿ, ಕಾರ್ಮಿಕರ ಕಲ್ಯಾಣ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಅಗತ್ಯವಾದ ವಸತಿ ಸೌಲಭ್ಯ ಮೊದಲಾದವುಗಳನ್ನು ತನ್ನಲ್ಲಿರುವ ಸಂಪನ್ಮೂಲ ಬಳಸಿಕೊಂಡು ಯೋಜನೆ ರೂಪಿಸಿ ಅದನ್ನು ಅನುಷ್ಠಾನ ಮಾಡಬಹುದು. ಅಲ್ಲದೆ, ಜನಸಂಖ್ಯೆಯ ಆಧಾರದ ಮೇಲೆ ಚುನಾವಣಾ ಕ್ಷೇತ್ರಗಳ ಮರುವಿಂಗಡಣೆ ಮಾಡಿ, ನ್ಯಾಯಯುತವಾದ ಪ್ರಾತಿನಿಧ್ಯವನ್ನು ಜನತೆಗೆ ನೀಡಬಹುದು.

▸▸ 2ನೇ ಪುಟಕ್ಕೆ...

# ಬೆಂಗಳೂರಿನ ಗಾಂಧಿನಗರದಲ್ಲಿ ಕುರುಬರ ಸಂಘಕ್ಕೆ ನೂತನ ಕಟ್ಟಡ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಾ.ಎಂ.ಆರ್.ಹುಲಿನಾಯ್ಕರ್ ಅವರನ್ನು ಸಮ್ಮೇಳನಕ್ಕೆ ಸ್ವಾಗತಿಸುತ್ತಿರುವುದು.

"ಶಿಕ್ಷಣದಿಂದ ವಂಚಿತರಾಗದೇ, ವೈಚಾರಿಕತೆ ಮತ್ತು ವೈಜ್ಞಾನಿಕತೆ ಬೆಳೆಸಿಕೊಂಡು ಸ್ವಾಭಿಮಾನಿಗಳಾಗಿ ಬದುಕಿ" ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸಮಾಜದ ಬಂಧುಗಳಿಗೆ ಕರೆ ನೀಡಿದರು. ಅವರು ಜುಲೈ 6ರಂದು ತಾವರೆಕೆರೆ ಬಳಿಯ ಕೆತೋಹಳ್ಳಿಯಲ್ಲಿರುವ ಬ್ರಹ್ಮಲೀನ ಜಗದ್ಗುರು ಶ್ರೀಬಿರೇಂದ್ರ ಕೇಶದ ತಾರಕಾನಂದಪುರಿ ಮಹಾಸ್ವಾಮಿಗಳ 19ನೇ ವರ್ಷದ ಪುಣ್ಯಾರಾಧನೆಯ ಸ್ಮರಣಾರ್ಥವಾಗಿ ಶ್ರೀಕಾಗಿನೆಲೆ ಮಹಾಸಂಸ್ಥಾನ ಕನಕಗುರುಪೀಠ ಹಾಗೂ ಶಾಖಾಮಠ ಬೆಂಗಳೂರು ಇವರು ಏರ್ಪಡಿಸಿದ್ದ 'ಭಕ್ತರ ಭಂಡಾರ ಕುಟೀರ'ವನ್ನು ಲೋಕಾರ್ಪಣೆ ಮಾಡಿ ಮಾತನಾಡುತ್ತಿದ್ದರು. ಅನಂತರ ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ "ಕಾಗಿನೆಲೆ ಗುರುಪೀಠದ ಶಾಖಾಮಠದ ಭಕ್ತರ ಭಂಡಾರ ಕುಟೀರಕ್ಕೆ ಹಿಂದೆ ನಾನೇ ಶಂಕುಸ್ಥಾಪನೆ ಮಾಡಿದ್ದೆ. ಈಗ ಉದ್ಘಾಟನೆ ಮಾಡುತ್ತಿರುವುದು ಸಂತಸ ತಂದಿದೆ. ಕಾಗಿನೆಲೆ ಗುರುಪೀಠದ ಸ್ವಾಮಿಗಳು ಶಾಖಾಮಠದ ನಿರ್ಮಾಣಕ್ಕೆ ಸಾಕಷ್ಟು ಶ್ರಮಿಸಿದ್ದಾರೆ. ಹತ್ತು ಕೋಟಿ ಬೆಲೆ ಬಾಳುವ ಒಂದು ಎಕರೆ ಜಾಗ ನೀಡಿರುವ ಶ್ರೀಮಹೇಶ್ ಅವರ ಕಾರ್ಯ ಶ್ಲಾಘನೀಯವಾಗಿದೆ. ಅವರಿಗೆ ಎಲ್ಲರ ಪರವಾಗಿ ಧನ್ಯವಾದಗಳು.

"ಕಾಗಿನೆಲೆ ಗುರುಪೀಠದ ಶ್ರೀನಿರಂಜನಾನಂದಪುರಿ ಸ್ವಾಮೀಜಿ ಅವರು ಯಾವುದೇ ಕಟ್ಟಡಗಳನ್ನು




ಅತ್ಯಂತ ಕ್ಷಿಪ್ರವಾಗಿ ಕಟ್ಟುತ್ತಾರೆ. ಎರಡೇ ವರ್ಷಗಳಲ್ಲಿ ಭಕ್ತರಿಂದ ವಂತಿಗೆ ಪಡೆದು, ಇದರ ನಿರ್ಮಾಣ ಕಾರ್ಯ ಮುಗಿಸಿದ್ದಾರೆ ಸಚಿವ ಸುರೇಶ್‌ಭೈರತಿ ಅವರು 50 ಲಕ್ಷ ರೂ.ಗಳ ದೇಣಿಗೆ ನೀಡಿರುವುದು ಸಂತೋಷದ ವಿಚಾರ. ಈ ಕುಟೀರವನ್ನು ನಿರ್ಮಾಣ ಮಾಡಲು ಎಲ್ಲರೂ ಸಹಾಯ ಮಾಡಿದ್ದಾರೆ. ಎಲ್ಲರಿಗೂ ಧನ್ಯವಾದಗಳು. ಸುಮಾರು ನಾಲ್ಕು ಕೋಟಿ ಹಣ ವೆಚ್ಚವಾಗಿದೆ. ಮಠ ಬೆಳೆಯಬೇಕಾದರೆ ಸಮುದಾಯದ ಜನರು ಉದಾರಿಗಳಾಗಬೇಕು. ಮಠಮಾನ್ಯಗಳು ಸರ್ಕಾರದ ಮೇಲೆ ಅವಲಂಬಿತವಾದರೆ ಬೆಳೆಯಲು ಸಾಧ್ಯವಿಲ್ಲ. 1992ರಲ್ಲಿ ನಮ್ಮ ಮಠಕ್ಕೆ ಮುಖ್ಯಮಂತ್ರಿ ಬಂಗಾರಪ್ಪ ಅವರು 25ಲಕ್ಷ ರೂ. ನೀಡಲು ಮುಂದಾದಾಗ ನಾವು ಅದನ್ನು ನಿರಾಕರಿಸಿದ್ದೆವು.

"ಜನರಲ್ಲಿ ಜಾಗೃತಿ ಮೂಡಿಸಲು ಮಠದ ಅಗತ್ಯವಿದೆ. ಸಂಘಟನೆಯಿಲ್ಲದಿದ್ದರೆ ಶಿಕ್ಷಣ, ಆರೋಗ್ಯ, ಸಾಮಾಜಿಕ ಸ್ಥಾನಮಾನ ದೊರೆಯುವುದಿಲ್ಲ. ಜಾತ್ಯತೀತ ಸಮಾಜ ನಿರ್ಮಾಣ ಮಾಡಬೇಕು ಎಂದು ಬಸವಾದಿ ಶರಣರು, ಕನಕದಾಸರು, ಮಹಾತ್ಮಾ ಗಾಂಧಿ, ಅಂಬೇಡ್ಕರ್ ಅವರು ಹೇಳಿದ್ದಾರೆ ಮತ್ತು ಅದನ್ನೇ ನಮ್ಮ ಸಂವಿಧಾನವೂ ಹೇಳುತ್ತದೆ.

▸▸ 4ನೇ ಪುಟಕ್ಕೆ...

## ಸಾಧಕರಿಗೆ ಸನ್ಮಾನ



ತುಮಕೂರಿನ ಪ್ರಜಾಪ್ರಗತಿ ಮತ್ತು ಪ್ರಜಾ ಟಿ.ವಿ.ಯ ಸಂಸ್ಥಾಪಕ ಸಂಪಾದಕರಾಗಿರುವ ಶ್ರೀ ಎಸ್. ನಾಗಣ್ಣ ಅವರಿಗೆ ಅವರ ಐದು ದಶಕಗಳ ಪತ್ರಿಕೋದ್ಯಮದ ಸೇವೆಯನ್ನು ಗುರುತಿಸಿ, ತುಮಕೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ದನಿಯಿಲ್ಲದ ಎಲ್ಲಾ ಸಮುದಾಯಗಳಿಗೂ ಧ್ವನಿಯಾಗಿ, ಸದಾ ಜಾತ್ಯತೀತ ಪ್ರಜ್ಞೆಯಿಂದ ಪ್ರಗತಿಪರ ಸಮಾಜವನ್ನು ನಿರ್ಮಿಸಲು ಶ್ರಮಿಸುತ್ತಿರುವವರು ಶ್ರೀ ನಾಗಣ್ಣ ಅವರು. ಜಿಲ್ಲಾ ಪತ್ರಿಕೆಯನ್ನು ರಾಜ್ಯಮಟ್ಟದ ಪತ್ರಿಕೆಯನ್ನಾಗಿ ರೂಪಿಸಿದ ಧೀಮಂತರು. ತುಮಕೂರಿನಲ್ಲಿ ಸಿ.ಎನ್.ಭಾಸ್ಕರಪ್ಪ ಅವರ ಪತ್ರಿಕೋದ್ಯಮದ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸಿದ ಕೀರ್ತಿ ಎಸ್. ನಾಗಣ್ಣ ಅವರಿಗೆ ಸಲ್ಲುತ್ತದೆ. ಇಂತಹ ಸಾಧಕರನ್ನು ತುಮಕೂರಿನ ಶ್ರೀದೇವಿ ವಿದ್ಯಾಸಂಸ್ಥೆಯ ಸ್ಥಾಪಕ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು ಜುಲೈ 24ರಂದು ಆತ್ಮೀಯವಾಗಿ ಸನ್ಮಾನಿಸಿದರು. ಚಿತ್ರದಲ್ಲಿ ಡಾ.ನರೇಂದ್ರ ವಿಶ್ವನಾಥ್, ಬ್ರಹ್ಮದೇವಯ್ಯ, ಶ್ರೀಮತಿ ರೂಪ, ಎಂ.ಎಸ್.ಪಾಟೀಲ್, ಶ್ರೀಮತಿ ಅಂಬಿಕಾ ಹುಲಿನಾಯ್ಕರ್,ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್, ಡಾ.ಎಂ.ಆರ್.ಹುಲಿನಾಯ್ಕರ್, ಡಾ.ಲಾವಣ್ಯ ರಮಣ, ಡಾ.ರಮಣ ಹುಲಿನಾಯ್ಕರ್, ಡಾ. ಹರೇಂದ್ರಕುಮಾರ್, ಡಾ. ಮೋಹನ್, ಪ್ರೊ. ಚಂದ್ರಪ್ಪ, ಪ್ರೊ.ಮುನಿಸ್ವಾಮಿ ಮೊದಲಾದವರಿದ್ದಾರೆ.

# ಸಾರ್ವತ್ರಿಕ ಜನಗಣತಿ ಮತ್ತು ಜಾತಿ ಸಮೀಕ್ಷೆ

▸▸ ಮೊದಲನೇ ಪುಟದಿಂದ

ಜನಗಣತಿಯ ಅಂಕಿಅಂಶಗಳು ಸರ್ಕಾರಕ್ಕಷ್ಟೇ ಅಲ್ಲದೆ, ವ್ಯವಹಾರ ಪ್ರಪಂಚದಲ್ಲಿ, ಕೈಗಾರಿಕೆ ಮತ್ತು ವಾಣಿಜ್ಯದಲ್ಲಿ ತೊಡಗಿರುವವರಿಗೂ ತಮ್ಮ ವ್ಯವಹಾರದ ತಂತ್ರಗಳನ್ನು ಮಾರುಕಟ್ಟೆಯ ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಲು ಸಹಾಯ ಮಾಡುತ್ತವೆ.

**ಜಾತಿ ಸಮೀಕ್ಷೆ:**

ಸ್ವತಂತ್ರ ಭಾರತದಲ್ಲಿ ಜಾತಿ ಸಮೀಕ್ಷೆಯು ರಾಜಕೀಯವಾಗಿ ಅತ್ಯಂತ ಸೂಕ್ಷ್ಮ ಹಾಗೂ ವಿವಾದಾತ್ಮಕ ವಿಷಯವಾಗಿದೆ. ಇದನ್ನು ಮೊಟ್ಟಮೊದಲ ಭಾರಿಗೆ 1931ರಲ್ಲಿ ಜಾತಿಜನಗಣತಿ ನಡೆಸಲಾಗಿತ್ತು. ಸ್ವಾತಂತ್ರ್ಯ ಬಂದ ನಂತರ ಜಾತಿ ಜನಗಣತಿ ನಡೆದಿಲ್ಲ. ಪರಿಶಿಷ್ಟ ಜಾತಿ ಮತ್ತು ವರ್ಗದ ಜನಗಣತಿ ನಡೆಯುತ್ತಾ ಬಂದಿದೆ. ಜಾತಿ ಸಮೀಕ್ಷೆಯ ಹಿಂದಿರುವ ಮುಖ್ಯ ಗುರಿಯೆಂದರೆ, ಸಮಾಜದಲ್ಲಿ ಜಾತಿ–ಜಾತಿಗಳ ನಡುವೆ ಇರುವ ಆರ್ಥಿಕ ಅಸಮಾನತೆಯ ಬಗೆಗೆ ವಿವರವಾಗಿ ಅಂಕಿಅಂಶಗಳನ್ನು ಕಲೆಹಾಕುವುದು. ಮತ್ತು ಅತಿ ಹಿಂದುಳಿದವರನ್ನು ಮೇಲಕ್ಕೆ ಎತ್ತಿ ಎಲ್ಲ ಸ್ತರಗಳಲ್ಲಿರುವ ಜನರನ್ನೂ ನಿಷ್ಪಕ್ಷಪಾತವಾಗಿ ಪ್ರಗತಿಯ ಹಾದಿಯಲ್ಲಿ ಕೊಂಡೊಯ್ಯುವುದಾಗಿರುತ್ತದೆ.

ಭಾರತದ ಸಂವಿಧಾನವು ಹತ್ತುವರ್ಷಕ್ಕೊಮ್ಮೆ ಜನಗಣತಿಯನ್ನು ನಡೆಸುವುದನ್ನು ಕಡ್ಡಾಯ ಮಾಡಿರುವುದಾದರೂ, ಅನುಸೂಚಿತ ಜಾತಿ ಮತ್ತು ಪಂಗಡಗಳವರ ಕಲ್ಯಾಣದ ದೃಷ್ಟಿಯಿಂದ ಆ ಜಾತಿ ಮತ್ತು ಪಂಗಡಗಳನ್ನು ಹೊರತುಪಡಿಸಿ ಉಳಿದ ಜಾತಿಗಳ ಗಣತಿ ಮಾಡಿರಲಿಲ್ಲ. ಹಲವಾರು ಸಮುದಾಯಗಳು, ಸಾಮಾಜಿಕ ಕಾರ್ಯಕರ್ತರು ಹಾಗೂ ರಾಜಕೀಯಪಕ್ಷಗಳಿಂದ ಸತತವಾಗಿ ಬಂದ ಬೇಡಿಕೆ ಹಾಗೂ ಒತ್ತಡಗಳ ಕಾರಣದಿಂದ ಕೇಂದ್ರ ಸರ್ಕಾರವು ಇತರ ಹಿಂದುಳಿದ ಜಾತಿಗಳವರನ್ನೂ ಜಾತಿಗಣತಿಯ ಕಕ್ಷೆಯಲ್ಲಿ ತರಲು ನಿರ್ಧರಿಸಿದೆ.

ಇತ್ತೀಚಿನ ವರ್ಷಗಳಲ್ಲಿ ಜಾತಿಗಣತಿಯನ್ನು ಕುರಿತು ಹಲವು ಬಗೆಯ ವಾದವಿವಾದಗಳು ಮುನ್ನಡೆಗೆ ಬರುತ್ತಿವೆ. ಕೆಲವು ರಾಜ್ಯಗಳು ತಾವೇ ಜಾತಿ ಸಮೀಕ್ಷೆಯನ್ನು ನಡೆಸುತ್ತಿವೆ. ಈ ವಿಷಯದಲ್ಲಿ ಇಲ್ಲಿಯವರೆಗೆ ಕೇಂದ್ರ ಸರ್ಕಾರವು ಎಚ್ಚರಿಕೆಯ ಮೌನವನ್ನು ವಹಿಸಿತ್ತು. ಕೇಂದ್ರ ಸರ್ಕಾರವು ಜಾತಿ ಗಣತಿ ಹಾಗೂ ಅದರಿಂದ ಆಗಬಹುದಾದ ದುಷ್ಪರಿಣಾಮಗಳು, ಲಾಭಗಳು, ಸಮಾಜದ ಮೇಲೆ ಸದ್ಯದಲ್ಲಿ ಮತ್ತು ದೀರ್ಘಾವಧಿಯಲ್ಲಿ ಯಾವ ಪರಿಣಾಮಗಳನ್ನು ಬೀರಬಹುದು ಎಂಬ ಎಲ್ಲ ವಿಷಯಗಳನ್ನು ಕೂಲಂಕಷವಾಗಿ ವಿಶ್ಲೇಷಿಸಿ ಈ ನಿರ್ಧಾರ ಕೈಗೊಂಡಿದೆ ಎಂದು ಭಾವಿಸಬಹುದು.

ಆದರೆ, ಆರ್ಥಿಕತೆಯ ಮಟ್ಟವನ್ನು ಬಿಟ್ಟು ಜಾತಿಯ ಮಾನದಂಡವನ್ನು ಅಭಿವೃದ್ಧಿಗಾಗಿ ಒಪ್ಪಿಕೊಂಡರೆ ಕೆಲವೊಂದು ತೊಂದರೆಗಳು ಎದುರಾಗಬಹುದು. ಸಹಜವಾಗಿ, ಜಾತಿಪದ್ಧತಿಯು ಇನ್ನೂ ಆಳವಾಗಿ ಬೇರೂರಿ ಒಟ್ಟಾರೆಯಾಗಿ ಸಮಾಜದಲ್ಲಿ ಶಾಂತಿ, ಸಹಬಾಳ್ವೆಯನ್ನು ಜಾತಿಗಣತಿಯು ಹಾಳುಮಾಡುವ ಸಂಭವವಿದ್ದು ಸಂವಿಧಾನದ ಗುರಿಯಾಗಿರುವ ಜಾತ್ಯತೀತ ಸಮಾಜದ ಸ್ಥಾಪನೆಗೆ ಅಡ್ಡಗಾಲನ್ನು ಹಾಕುತ್ತದೆ ಎನ್ನುವ ಅಭಿಪ್ರಾಯವೂ ಇದೆ. ಹಿಂದುಳಿದವರ ಅಥವಾ ಎಲ್ಲಾ ವರ್ಗದ ಜನರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ವಿವರಗಳನ್ನು ಅಭಿವೃದ್ಧಿಗೆ ಬಳಸಿಕೊಳ್ಳದೇ ರಾಜಕೀಯಪಕ್ಷಗಳು ತಮ್ಮ ಮತ ಬ್ಯಾಂಕ್‌ಗಳನ್ನು ರೂಪಿಸಿಕೊಳ್ಳಲು ಈ ಅಂಕಿಅಂಶಗಳನ್ನು ಬಳಸಿಕೊಂಡರೆ ಅದರಿಂದ ಖಂಡಿತ ಸಮಾಜದ ಸ್ವಾಸ್ಥ್ಯ ನಾಶವಾಗುವ ಅಪಾಯವಿದೆ.

ಜಾತಿಗಣತಿಗೆ ಇರುವ ಇನ್ನೊಂದು ವಿರೋಧದ ಕಾರಣವೆಂದರೆ, ಭಾರತದಲ್ಲಿ ಜಾತಿ ಪದ್ಧತಿಯು ಬಹುಸಂಕೀರ್ಣವಾಗಿದ್ದು, ಗಣತಿಯು ಸಾಕಷ್ಟು ಗೊಂದಲಕ್ಕೆ ಕಾರಣವಾಗುತ್ತದೆ ಹಾಗೂ ಹಿಂದುಳಿದ ಜಾತಿಗಳಲ್ಲಿಯೇ ಪರಸ್ಪರ ವಿವಾದ, ಮೇಲಾಟಗಳಿಗೆ ಎಡೆ ಮಾಡಿಕೊಡುತ್ತದೆ. ಈ ಬೆಂಕಿಗೆ ತುಪ್ಪವನ್ನು ಸುರಿಯುವ ಕೆಲಸವನ್ನು ರಾಜಕೀಯಪಕ್ಷಗಳು ನಿರ್ಲಜ್ಜತೆಯಿಂದ ಖಂಡಿತ ಮಾಡುತ್ತವೆ.

ಅಮೆರಿಕ ಸಂಯುಕ್ತ ಸಂಸ್ಥಾನಗಳು, ಮಲೇಷಿಯಾ, ಶ್ರೀಲಂಕಾ, ದಕ್ಷಿಣ ಆಫ್ರಿಕಾ ಮೊದಲಾದ ದೇಶಗಳಲ್ಲಿಯೂ ಇಂತಹ ಗಣತಿಯನ್ನು ನಡೆಸುತ್ತಾರೆ. ಅವರಲ್ಲಿ ಭಾರತದಲ್ಲಿರುವಂತಹ ಜಾತಿ ಪದ್ಧತಿಯಿಲ್ಲದಿದ್ದರೂ, ಜನಾಂಗೀಯ ಭೇದಗಳನ್ನು ಪರಿಗಣಿಸಿ ಅವರಿಗೆ ಕೆಲವೊಂದು ಸವಲತ್ತುಗಳನ್ನು ನೀಡುವ ಉದ್ದೇಶದಿಂದ ಇಂತಹ ಗಣತಿಯನ್ನು ಕೈಗೊಳ್ಳುತ್ತಾರೆ.

**ಮುಂಬರುವ ಜನಗಣತಿ ಮತ್ತು ಅನುಸರಿಸಬೇಕಾದ ವಿಧಾನಗಳು:**

ಅಂತಿಮವಾಗಿ ಜಾತಿಗಣತಿಯ ವಿಷಯದಲ್ಲಿ ರಾಷ್ಟ್ರವು ಒಕ್ಕೊರಲಿನಿಂದ ಒತ್ತಾಯಿಸಿದರೆ, ಈ ವಿಷಯದಲ್ಲಿ ಹಲವು ನ್ಯಾಯಾಲಯಗಳು ನೀಡಿರುವ ತೀರ್ಪುಗಳನ್ನು ಕೇಂದ್ರ ಸರ್ಕಾರವು ಪರಿಗಣಿಸಿ ಈ ಕೆಳಗೆ ನೀಡಿರುವ ಇತರ ಸಲಹೆಗಳನ್ನು ಕೂಡ ಅನುಸರಿಸಬೇಕಾಗುತ್ತದೆ:

- ಪ್ರತಿಯೊಂದು ಜಾತಿ, ಒಳಜಾತಿ ಇವುಗಳ ಮಾಹಿತಿಯನ್ನು ಜಿಲ್ಲಾಮಟ್ಟದಿಂದಲೇ ನಿಕರವಾಗಿ ಸಂಗ್ರಹಿಸಬೇಕು.
- ರಾಜಕೀಯಪಕ್ಷಗಳಿಗೆ ಜಾತಿಗಣತಿಯ ಅಂಕಿಅಂಶಗಳು, ಸಮಾಜವನ್ನು ಒಡೆಯಲು ಬಳಸುವ ಸಾಧನವಾಗಬಾರದು. ಭಾರತದಲ್ಲಿರುವ ವಿವಿಧತೆಗೆ ಧಕ್ಕೆ ಬಾರದಂತೆ ನೋಡಿಕೊಳ್ಳುವ ಸಾಮಾಜಿಕ ಜವಾಬ್ದಾರಿ ಸಂಬಂಧಪಟ್ಟ ಎಲ್ಲರ ಮೇಲೆಯೂ ಇರುತ್ತದೆ.
- ಪ್ರಸ್ತುತ ನಮಗೆ ಮಾಹಿತಿತಂತ್ರ ಜ್ಞಾನದ ಕ್ಷೇತ್ರದಿಂದ ದೊರೆತಿರುವ ಆರ್ಟಿಫಿಷಲ್ ಇಂಟಲಿಜೆನ್ಸಿ (ಕೃತಕ ಬುದ್ಧಿಮತ್ತೆ) ಬಿಗ್‌ಡೇಟಾ ವಿಶ್ಲೇಷಣೆ, ಬ್ಲಾಕ್‌ಚೈನ್ ಡೇಟಾಬೇಸ್ ಮೊದಲಾದವುಗಳನ್ನು ಅಂಕಿಅಂಶಗಳ ವಿಶ್ಲೇಷಣೆಗೆ ಬಳಸಿಕೊಳ್ಳಬೇಕು.
- ಪ್ರಸ್ತುತ ಪರಿಶಿಷ್ಟ ಜಾತಿಗೆ ಒಳಮೀಸಲಾತಿ ಕೊಡುವ ಕಾರ್ಯ ನಡೆಯುತ್ತಿದೆ. ಹಿಂದುಳಿದ ಜಾತಿಯವರಿಗೆ ಒಳಮೀಸಲಾತಿ ವ್ಯವಸ್ಥೆಯಿಲ್ಲ. ಮುಂದೆ ಅದರ ಬೇಡಿಕೆ ಬರಬಹುದು. ಆದ್ದರಿಂದ ಈ ಸಮೀಕ್ಷೆಯ ಸಂದರ್ಭದಲ್ಲೇ ಹಿಂದುಳಿದ ಜಾತಿಯಲ್ಲಿನ ಪ್ರತಿಯೊಂದು ಒಳಜಾತಿಯ ಸಾಮಾಜಿಕ ಮತ್ತು ಆರ್ಥಿಕ ಅಂಕಿಅಂಶಗಳನ್ನು ಸಮರ್ಪಕವಾಗಿ ಸಂಗ್ರಹಿಸಬೇಕು.
- ಈ ಬಾರಿ ಜನಗಣತಿಯ ಕಾರ್ಯವಾದ ಮೇಲೆ, ಮುಂದಕ್ಕೆ ಫಲಾನುಭವಿಗಳಾಗಲು ಬಯಸುವವರಾಗಲೀ ಅಥವಾ ಇರುವ ಮೀಸಲಾತಿಯ ಪ್ರಮಾಣ ಹೆಚ್ಚಿಸಿಕೊಳ್ಳಬೇಕೆಂದು ಬಯಸುವವರಾಗಲೀ ಪ್ರತಿಭಟನೆ, ಮುಷ್ಕರಗಳನ್ನು ಮಾಡುವಂತಿರಬಾರದು ಎಂಬ ಉದ್ದೇಶದಿಂದ ಅಗತ್ಯವಾದ ಎಲ್ಲ ಮುಂಜಾಗ್ರತಾ ಕ್ರಮಗಳನ್ನೂ ತೆಗೆದುಕೊಳ್ಳಬೇಕು. ಇದರಿಂದ ದೇಶದಲ್ಲಿ ಶಾಂತಿ ನೆಲಸುತ್ತದೆ ಮತ್ತು ಮುಷ್ಕರಗಳಿಂದ ಆಗುವ ಮಾನವದಿನಗಳ ನಷ್ಟವು ತಪ್ಪಿ ದೇಶಕ್ಕೆ ಉಪಯೋಗವಾಗುತ್ತದೆ.
- ಹಿಂದುಳಿದವರ/ಪರಿಶಿಷ್ಟ ಜಾತಿ/ಪಂಗಡಗಳಲ್ಲಿ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿ ಇರುವವರು ಮತ್ತೆ ಮತ್ತೆ ಮೀಸಲಾತಿಯ ಲಾಭಕ್ಕೆ ಕೈಯೊಡ್ಡದ ಹಾಗೆ ಮಾಡಲು ಅಂತಹವರ ಬಗೆಗೆ ನಿಕರವಾದ ಮಾಹಿತಿಯನ್ನು ಗಣತಿಯ ಸಮಯದಲ್ಲಿಯೇ ಸಂಗ್ರಹಿಸಬೇಕು. 'ಕ್ರೀಮಿ ಲೇಯರ್' ಪದ್ಧತಿಯನ್ನು ಎಲ್ಲಾ ಜಾತಿಯವರಿಗೂ ಅನ್ವಯಿಸದಿದ್ದರೆ 'ಸಾಮಾಜಿಕ ನ್ಯಾಯದ' ಮೂಲ ಉದ್ದೇಶವೇ ಕೈತಪ್ಪಿಹೋಗುತ್ತದೆ.
- ಜನಗಣತಿಯನ್ನು ಮಾಡುವವರಿಗೆ ಅವರು ಜಾತಿ ಮತ್ತು ಒಳಜಾತಿಗಳ ಬಗೆಗೆ ಸಾಕಷ್ಟು ಜ್ಞಾನವನ್ನು ಹೊಂದಿರುವಂತೆ ಮಾಡಲು ಅವರಿಗೆ ತರಬೇತಿಯನ್ನು ನೀಡಬೇಕು. ಅಲ್ಲದೆ ಜನರು ತಮ್ಮ ಜಾತಿ, ಆರ್ಥಿಕ ಪರಿಸ್ಥಿತಿಯನ್ನು ಕುರಿತು ತಪ್ಪು ಮಾಹಿತಿಯನ್ನು ನೀಡಿ ಅವರನ್ನು ಮೋಸಗೊಳಿಸಲಾಗದ ಹಾಗೆ ತಯಾರು ಮಾಡಬೇಕಾದ ಆವಶ್ಯಕತೆ ಇದೆ.
- 'ಸೆಲ್ಫ್–ಎನ್ಯೂಮರೇಷನ್' ಮಾಡಿಕೊಳ್ಳುವ ಸೌಲಭ್ಯವನ್ನು ಜನರಿಗೆ ಒದಗಿಸುವುದು ಇಂದಿನ ದಿನಗಳಲ್ಲಿ ಅಷ್ಟೇನೂ ಕಷ್ಟದ ಕೆಲಸವಲ್ಲ. ಇಂತಹ ಸೌಲಭ್ಯವನ್ನು ಪಡೆಯುವವರು ತಮ್ಮ ಆಧಾರ್ ಸಂಖ್ಯೆಯನ್ನು, ಬ್ಯಾಂಕಿನಲ್ಲಿರುವ ತಮ್ಮ ಖಾತೆಯ ಮತ್ತು ತಾವು ಹೊಂದಿರುವ ಆಸ್ತಿಯ ವಿವರಗಳನ್ನು ನೀಡುವುದನ್ನು ಕಡ್ಡಾಯಮಾಡಬೇಕು ಮತ್ತು ಇವರ ವಿವರಗಳನ್ನು ಆದಾಯ ತೆರಿಗೆ, ಭವಿಷ್ಯನಿಧಿ ಮತ್ತಿತರ ಇಲಾಖೆಗಳಿಂದಲೂ ಪಡೆದುಕೊಂಡರೆ, ಅವರು ತಪ್ಪು ಮಾಹಿತಿಗಳನ್ನು ನೀಡುವುದನ್ನು ತಪ್ಪಿಸಿದಂತಾಗುತ್ತದೆ. ಅಂತಹವರ ಮನೆಯ ವಿವರಗಳನ್ನು 'ಜಿಪಿಎಸ್' ಮೂಲಕ ಪತ್ತೆ ಹಚ್ಚುವಂತಿರಬೇಕು.
- ಸಂಗ್ರಹಿಸಿದ ಜನಗಣತಿಯ ಅಂಕಿಅಂಶಗಳು ಸರ್ಕಾರದಿಂದಾಗಲೀ ಅಥವಾ ಜನಗಣತಿಯ ಕೆಲಸದಲ್ಲಿ ತೊಡಗಿರುವವರಿಂದಾಗಲೀ ಅನರ್ಹರ ಕೈಗೆ ದೊರಕದ ಹಾಗೆ ಮಾಡಬೇಕು ಮತ್ತು ಈ ಅಂಕಿ ಅಂಶಗಳು ಸಾಮಾಜಿಕ ಮತ್ತು ಆರ್ಥಿಕ ತಾರತಮ್ಯವನ್ನು ಕುರಿತ ಮಹತ್ವದ ಮಾಹಿತಿಗಳನ್ನು ಒಳಕೊಂಡಿರುವುದರಿಂದ ಅವುಗಳನ್ನು ಜವಾಬ್ದಾರಿಯುತವಾಗಿ ಕಾಪಾಡಬೇಕು ಮತ್ತು ಬಳಸಿಕೊಳ್ಳಬೇಕು.
- ಕೆಲವು ರಾಜ್ಯಗಳು ಈಗಾಗಲೇ ಜಾತಿ ಸಮೀಕ್ಷೆಯನ್ನು ಮಾಡಿವೆ ಮತ್ತು ಕೆಲವು ಈಗಲೂ ಮಾಡಲು ತೊಡಗಿವೆ. ನ್ಯಾಯಾಲಯಗಳು ಇದನ್ನು ತಪ್ಪು ಎಂದು ಪರಿಗಣಿಸದೆ ಇದಕ್ಕೆ ಅವಕಾಶವನ್ನು ಮಾಡಿಕೊಟ್ಟಿರುವುದರಿಂದ ಈ ಸಮೀಕ್ಷೆಯನ್ನು ತಡೆಯಲು ಸಾಧ್ಯವಿಲ್ಲ. ಆದರೆ, ಕೇಂದ್ರ ಹಾಗೂ ರಾಜ್ಯಗಳ ಅಂಕಿಅಂಶಗಳಲ್ಲಿ ಭಿನ್ನತೆಯಿದ್ದು, ಅದು ಇವೆರಡರ ನಡುವೆ ತಿಕ್ಕಾಟಕ್ಕೆ ಅವಕಾಶವನ್ನು ನೀಡದಂತೆ ನೋಡಿಕೊಳ್ಳಬೇಕು. ಮೂಲ ಅಂಕಿಅಂಶಗಳ ಬಗೆಗೇ ಗೊಂದಲವಿದ್ದರೆ ಗಣತಿಯು ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತದೆ.
- ಸಮಾನಾಂತರವಾಗಿ ಜಾತಿ ಸಮೀಕ್ಷೆಯನ್ನು ಮಾಡುತ್ತಿರುವ ರಾಜ್ಯಗಳು, ಹಾಗೆ ಮಾಡುವುದು ನಿಜವಾಗಿಯೂ ಅಗತ್ಯವಾಗಿದ್ದರೆ, ಅದನ್ನು ಪ್ರಾಮಾಣಿಕವಾಗಿ ಮತ್ತು ವೈಜ್ಞಾನಿಕವಾಗಿ ಮಾಡಬೇಕು. ಕರ್ನಾಟಕ ಸರ್ಕಾರವು ಹಿಂದೆ ಮಾಡಿದ್ದ ಸಮೀಕ್ಷೆಯನ್ನು ರಾಜ್ಯದ ಬಹುತೇಕರು ಅವೈಜ್ಞಾನಿಕ, ಅಪ್ರಾಮಾಣಿಕ ಮತ್ತು ಸಮೀಕ್ಷೆ ಮಾಡಿ ಹತ್ತುವರ್ಷಗಳ ಕಳೆದುಹೋಗಿದೆ, ಅದರ ಡೇಟಾ ಈಗ ಹಳೆಯದಾಗಿದೆ ಎಂದೆಲ್ಲಾ ಪ್ರತಿಭಟಿಸಿದುದರಿಂದ ಈಗ ಮತ್ತೆ ಇನ್ನೊಂದು ಸಮೀಕ್ಷೆಯನ್ನು ಮಾಡಲು ತೀರ್ಮಾನ ಮಾಡಲಾಗಿದೆ. ಹಿಂದಿನ ಸಮೀಕ್ಷೆಯ ವಿಚಾರದಲ್ಲಿ ಜನರು ಮಾಡಿದ ಆಕ್ಷೇಪಣೆಗಳಿಗೆ ಈ ಬಾರಿ ಅವಕಾಶ ಕೊಡದ ಹಾಗೆ ಮಾಡುತ್ತೇವೆ ಹಾಗೂ ಸಮೀಕ್ಷೆ ಮಾಡಿದ ಮನೆಗಳಿಗೆ ಗುರುತಿಗಾಗಿ ' ಆಯಾ ಮನೆಯ ಬಾಗಿಲಿಗೆ 'ಸಮೀಕ್ಷೆಯನ್ನು ಮಾಡಲಾಗಿದೆ' ಎಂಬ ಚೀಟಿಯನ್ನು ಅಂಟಿಸಲಾಗುತ್ತದೆ ಎಂದು ಹೇಳಲಾಗುತ್ತಿದೆ. ಸಮೀಕ್ಷೆಯನ್ನೇ ಮಾಡದೆ, ಚೀಟಿಯನ್ನು ಅಂಟಿಸುವ ಸಮೀಕ್ಷಕರಿದ್ದಾರೆ ಎಂಬ ವರದಿಗಳು ರಾಜ್ಯದಾದ್ಯಂತ ಸದ್ದು ಮಾಡುತ್ತಿವೆ. ಇದು ನಾವು ದೇಶಕ್ಕೆ, ದೇಶದ ಜನತೆಗೆ ಮಾಡುತ್ತಿರುವ ಮಹಾದ್ರೋಹ. ಕಾರಣ, ಇಂತಹ ಸಮೀಕ್ಷೆಯಿಂದ ಹಣ ವ್ಯಯವಾಗುವುದಲ್ಲದೆ ಉದ್ದೇಶಿತ ಪ್ರಯೋಜನವೂ ಈಡೇರುವುದಿಲ್ಲ. ಇದನ್ನು ತಪ್ಪಿಸಿ ನ್ಯಾಯಯುತವಾದ ಸಮೀಕ್ಷೆಯನ್ನು ರಾಜ್ಯ ಸರ್ಕಾರಗಳು ನಡೆಸಬೇಕು.
- ಮನೆಮನೆಯಿಂದ ಮಾಹಿತಿ, ಸಂಗ್ರಹಿಸುವಾಗ ಮತ್ತು ಅದನ್ನು ತಾಲೂಕು ಮತ್ತು ಜಿಲ್ಲಾಮಟ್ಟದಲ್ಲಿ ವಿಶ್ಲೇಷಿಸಿ ಬಿಡುಗಡೆ ಮಾಡುವಾಗ ಆಯಾಯ ಜಿಲ್ಲಾಧಿಕಾರಿಗಳನ್ನು ಆ ಮಾಹಿತಿಗೆ ಉತ್ತರದಾಯಿಗಳನ್ನಾಗಿ ಮಾಡಬೇಕು. ಇಂತಹ ಜವಾಬ್ದಾರಿ ಕೊನೆಯ ಹಂತದ ತನಕ ನಿಗದಿಯಾಗಬೇಕು. ನ್ಯಾಯಾಲಯಗಳಿಗೆ ಅವರ ಕರ್ತವ್ಯವನ್ನು ಪರಿಶೀಲನೆ ಮಾಡುವ ಮತ್ತು ಸಮೀಕ್ಷಾಕಾರ್ಯದಲ್ಲಿ ತೊಡಗಿಸಿಕೊಂಡವರನ್ನು ಕಾನೂನು ವ್ಯಾಪ್ತಿಗೆ ತರುವ ಅವಕಾಶವಿರಬೇಕು.
- ಕೇಂದ್ರವು ಸಂಗ್ರಹಿಸಿದ ಅಂಕಿಅಂಶಗಳ ಆಧಾರದ ಮೇಲೆ ಲೋಕಸಭೆ ಮತ್ತು ವಿಧಾನಸಭೆಗಳ ಚುನಾವಣಾ ಕ್ಷೇತ್ರಗಳ ಪುನರ್ವಿಂಗಡಣೆ ಆಗಬೇಕಾಗಿರುವುದರಿಂದ, ಹಾಗೂ ದೇಶದ ಯಾವ ಭಾಗಕ್ಕೂ ಪ್ರಾತಿನಿಧ್ಯದಲ್ಲಿ ಮೋಸವಾಗದ ಹಾಗೆ ಇರಬೇಕಾದುದರಿಂದ, ಜನಗಣತಿಯ ಗುಣಮಟ್ಟವು ಅತ್ಯುತ್ತಮವಾಗಿರಬೇಕು.
- ರಾಜಕೀಯ ಪಕ್ಷಗಳು ತಮ್ಮ ಜವಾಬ್ದಾರಿಯನ್ನು ಅರಿತು, ಜನಗಣತಿಯ ಮಾಹಿತಿಗಳ ದುರ್ಬಳಕೆ ಮಾಡಿಕೊಳ್ಳಬಾರದು.
- ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಮಾಹಿತಿಗಳನ್ನು ಪ್ರಾಮಾಣಿಕವಾಗಿ ಹಿಂದುಳಿದ ಜಾತಿ/ಪಂಗಡಗಳವರ ಮಕ್ಕಳ ಶಿಕ್ಷಣಕ್ಕಾಗಿ ಬಳಸಿಕೊಳ್ಳಬೇಕು ಮತ್ತು ಅವರನ್ನು ಇತರ ಮಕ್ಕಳೊಂದಿಗೆ ಸಮಾನ ಮಟ್ಟದಲ್ಲಿ ಸ್ಪರ್ಧಿಸುವ ಹಂತಕ್ಕೆ ತರಬೇಕು. ಇದಕ್ಕಾಗಿ ಅವರ ವಿದ್ಯಾಭ್ಯಾಸಕ್ಕೆ ಅಗತ್ಯವಾದ ವಿದ್ಯಾರ್ಥಿವೇತನ, ಲ್ಯಾಪ್‌ಟಾಪ್ ಮೊದಲಾದವುಗಳಿಗಾಗಿ ಧನಸಹಾಯ ಮಾಡಬೇಕು ಮತ್ತು ಅವರಿಗೆ ಆಯಾ ಕಾಲದ ಕೈಗಾರಿಕೆ/ವ್ಯವಹಾರದ ಅಗತ್ಯಗಳಿಗೆ ಬೇಕಾಗುವ ಉನ್ನತ ಮಟ್ಟದ ತರಬೇತಿಯನ್ನು ನೀಡಿ ಅವರನ್ನು ಸಬಲಗೊಳಿಸಬೇಕು. ಇದರಿಂದ ಉದ್ಯೋಗದ ಅವಧಿಯಲ್ಲಿ ಅವರು ಮೀಸಲಾತಿಗೆ ಜೋತು ಬೀಳಬೇಕಾದ ಆವಶ್ಯಕತೆ ಇರುವುದಿಲ್ಲ ಮತ್ತು ಅವರ ಮುಂದಿನ ಪೀಳಿಗೆಯವರು ಮೀಸಲಾತಿಯ ಪರಿಧಿಯಿಂದ ಹೊರಬರುವಂತಾಗಿ ಮೀಸಲಾತಿಯ ಸೌಲಭ್ಯದಿಂದ ವಂಚಿತರಾಗಿರುವ ಇತರರಿಗೆ ಅದು ದೊರಕುವಂತಾಗುತ್ತದೆ. ಇದನ್ನು ಸರ್ಕಾರಗಳು ಗಂಭೀರವಾಗಿ ಪರಿಗಣಿಸಬೇಕು. ಹೀಗೆ ಮಾಡಿದರೆ ದೇಶಕ್ಕೆ ಜನಗಣತಿಯು ನೀಡಬಹುದಾದ ಒಂದು ಮಹತ್ತರವಾದ ಕೊಡುಗೆಯಾಗುತ್ತದೆ.

**ಉಪಸಂಹಾರ:**

ಅಂತಿಮವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಲ್ಲಿ ಮಾಡಿಕೊಳ್ಳುವ ಆಗ್ರಹಪೂರ್ವಕ ವಿನಂತಿಯೆಂದರೆ, ಜನಗಣತಿ ಹಾಗೂ ಜಾತಿ ಸಮೀಕ್ಷೆಯ ಕಾರ್ಯಗಳನ್ನು ಪ್ರಾಮಾಣಿಕವಾಗಿ, ಪಾರದರ್ಶಕವಾಗಿ ಮಾಡಿ.

ಏಕೆಂದರೆ, ಈ ಸಮೀಕ್ಷೆಯು ಪ್ರಗತಿಯ ಹಾದಿಯಲ್ಲಿ ಭಾರತವನ್ನು ಕೊಂಡೊಯ್ಯುವ ಸಾಧನವಾಗಿದೆ. ಅದನ್ನು ರಾಜಕೀಯಪಕ್ಷಗಳು ತಮ್ಮ ಕ್ಷುದ್ರವಾದ ಸ್ವಾರ್ಥಸಾಧನೆಗೆ ಬಳಸಿಕೊಳ್ಳುವಂತೆ ಆಗಬಾರದು. ಈ ವಿಷಯದಲ್ಲಿ ಅವು ಅತ್ಯಂತ ಜವಾಬ್ದಾರಿಯಾಗಿ ವರ್ತಿಸುತ್ತವೆ ಮತ್ತು ದೇಶದಲ್ಲಿ ಸಮಾನತೆಯ ನ್ಯಾಯವನ್ನು ಎಲ್ಲರಿಗೂ ಒದಗಿಸುತ್ತವೆ ಎಂದು ನಾವು ಆಶಿಸುತ್ತೇವೆ.

**ಪತ್ರಿಕೆಯ ಬಳಗ**

ಸಹಾಯಕ ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು:
**ಎನ್. ಆನಂದ**

ಪುಟ ವಿನ್ಯಾಸ:
**ಸುಮಾ ಸಾಗರ್**

# ಮಕ್ಕಳಲ್ಲಿ ಸ್ಥೂಲಕಾಯ

## ದೈಹಿಕ ಮತ್ತು ಮಾನಸಿಕ ಆರೋಗ್ಯದ ಸಮಸ್ಯೆಗಳು



▪ ಡಾ. ಟಿ.ಎಸ್. ಭೀಮರಾಜು
ಮನೋವೈದ್ಯಕೀಯ ನರ್ಸಿಂಗ್ ಪ್ರೊಫೆಸರ್,
ಶ್ರೀದೇವಿ ನರ್ಸಿಂಗ್ ಕಾಲೇಜು



**ಕಡಮೆ ಆದಾಯವಿರುವ ಕುಟುಂಬದವರಿಗೆ ಆರೋಗ್ಯಕರ ಆಹಾರದ, ಮನೋರಂಜನೆಯ ಅವಕಾಶಗಳು ಅಷ್ಟಾಗಿ ಇರುವುದಿಲ್ಲ. ತಮ್ಮ ಮಕ್ಕಳ ಆರೋಗ್ಯ ಮತ್ತು ಶಿಕ್ಷಣವನ್ನು ಕುರಿತು ಅವರು ಗಂಭೀರವಾಗಿ ಆಲೋಚಿಸುವುದಿಲ್ಲ. ಆರ್ಥಿಕ ಪರಿಸ್ಥಿತಿಯ ಕಾರಣದಿಂದ ಅವರು ಸುಲಭ ಬೆಲೆಯ ಆದರೆ ಹೆಚ್ಚು ಕ್ಯಾಲೊರಿಗಳಿರುವ ಆಹಾರವನ್ನು ಬಳಸುತ್ತಾರೆ.**

**ಬಾಲ್ಯದಲ್ಲಿ ಸ್ಥೂಲಕಾಯ:**

21ನೆಯ ಶತಮಾನದಲ್ಲಿ ಚಿಕ್ಕ ಮಕ್ಕಳಲ್ಲಿ ಕಂಡುಬರುತ್ತಿರುವ ಸ್ಥೂಲಕಾಯದ ಸಮಸ್ಯೆಯು ಇಡೀ ಪ್ರಪಂಚವನ್ನೇ ಕಾಡುತ್ತಿದೆ. ಒಂದು ಕಾಲದಲ್ಲಿ ಮುಂದುವರಿದ ದೇಶಗಳಲ್ಲಿ ಮಾತ್ರ ಈ ಸಮಸ್ಯೆಯು ಕಂಡುಬರುತ್ತದೆ ಎಂದು ತಿಳಿಯಲಾಗುತ್ತಿತ್ತು. ಆದರೆ, ಈಗ ಇದರ ಕಬಂಧಬಾಹುವು ಅಭಿವೃದ್ಧಿಶೀಲ ದೇಶಗಳನ್ನೂ ಅದರಲ್ಲಿಯೂ ಅಲ್ಲಿನ ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವವರನ್ನು ಹೆಚ್ಚು ಹೆಚ್ಚಾಗಿ ಅಪ್ಪಿಕೊಳ್ಳುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯ ಒಂದು ವರದಿಯ ಪ್ರಕಾರ, 5ರಿಂದ 19ನೆಯ ವರ್ಷಗಳ ನಡುವಿನ ವಯಸ್ಸಿನವರಲ್ಲಿ 1975ರಲ್ಲಿ ಇದ್ದ ಶೇ. 4ರಷ್ಟು ಇದ್ದ ಸ್ಥೂಲಕಾಯದವರ ಪ್ರಮಾಣವು 2015ರ ವೇಳೆಗೆ ಶೇ 18ಕ್ಕೆ ಮತ್ತು 2022ರಲ್ಲಿ ಶೇ. 20ಕ್ಕೆ ಏರಿದೆ. ಈಗ ಇಂತಹವರ ಸಂಖ್ಯೆ 160 ದಶಲಕ್ಷ. ಈ ಏರಿಕೆಯ ದರವು ಇಂದಿನ ದಿನಗಳಲ್ಲಿ ಇನ್ನೂ ಹೆಚ್ಚಾಗುತ್ತಿರುವುದು ಹಾಗೂ ತತ್ಪರಿಣಾಮವಾದ ಅಂತಹ ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯದ ಸಮಸ್ಯೆಗಳು ಗಂಭೀರವಾಗಿ ನೋಡಬೇಕಾದ ವಿಷಯವಾಗಿವೆ.

**ಕಾರಣಗಳು:**

ಮಕ್ಕಳಲ್ಲಿ ಕಂಡುಬರುತ್ತಿರುವ ಸ್ಥೂಲಕಾಯದ ಸಮಸ್ಯೆಗೆ ಹಲವಾರು ಕಾರಣಗಳಿವೆ. ಮುಖ್ಯವಾಗಿ ವಾಂಶಿಕ ಕಾರಣಗಳು, ಮಕ್ಕಳ ವರ್ತನೆಗಳು, ಪರಿಸರದ ಕಾರಣಗಳು, ಹಾಗೂ ಸಾಮಾಜಿಕ–ಆರ್ಥಿಕ ಸ್ಥಿತಿಗಳು. ಅವುಗಳನ್ನು ವಿವರವಾಗಿ ಇಲ್ಲಿ ನಾವು ನೋಡಬಹುದು:

- **ಅನಾರೋಗ್ಯಕರ ಆಹಾರ ಪದ್ಧತಿ:** ಕ್ಯಾಲರಿಗಳು ಅಧಿಕ ಪ್ರಮಾಣದಲ್ಲಿ ಇದ್ದು, ಪೋಷಕಾಂಶಗಳು ಕಡಮೆ ಇರುವ ಆಹಾರಗಳು, ಸಿದ್ಧ ಆಹಾರಗಳು, ಸಿಹಿ ಹೆಚ್ಚಿನ ಪ್ರಮಾಣದಲ್ಲಿರುವ ತಿಂಡಿಗಳು, ಕಾರ್ಬೋನೇಟೆಡ್ ತಂಪು ಪಾನೀಯಗಳು, ಮಕ್ಕಳ ಆರೋಗ್ಯವನ್ನು ಹಾಳು ಮಾಡುತ್ತಿವೆ. ಮಾರುಕಟ್ಟೆಯಲ್ಲಿ ಈ ಪದಾರ್ಥಗಳು ಸುಲಭವಾಗಿ ದೊರಕುತ್ತಿರುವುದು ಹಾಗೂ ಅವುಗಳ ಆಕರ್ಷಕ ಜಾಹಿರಾತುಗಳು ಮಕ್ಕಳನ್ನು ದಾರಿತಪ್ಪಿಸುತ್ತಿವೆ.
- **ದೈಹಿಕ ಚಟುವಟಿಕೆಗಳನ್ನು ನಿರ್ಲಕ್ಷಿಸುತ್ತಿರುವುದು:** ಇಂದಿನ ಮಕ್ಕಳು ಸಣ್ಣ ವಯಸ್ಸಿನಿಂದಲೇ ಟಿವಿ, ವೀಡಿಯೋ ಆಟಗಳು, ಮೊಬೈಲ್ ಫೋನ್‌ಗಳ ಬಳಕೆ ಮೊದಲಾದವುಗಳಲ್ಲಿ ಹೆಚ್ಚಿನ ಸಮಯವನ್ನು ಕಳೆಯುತ್ತಾರೆ. ಇದರಿಂದಾಗಿ ಅವರಿಗೆ ಮನೆಯ ಹೊರಗೆ ಆಟ, ಓಟಗಳತ್ತ ಗಮನವೇ ಇರುವುದಿಲ್ಲ. ಸ್ಥೂಲಕಾಯದ ಸಮಸ್ಯೆಯು ಮಕ್ಕಳಲ್ಲಿ ಹೆಚ್ಚಾಗುತ್ತಿರುವುದಕ್ಕೆ ಇದು ಮುಖ್ಯ ಕಾರಣವಾಗಿದೆ.
- **ವಂಶವಾಹಿಗಳು ಹಾಗೂ ಕುಟುಂಬದ ಹಿರಿಯರ ವರ್ತನೆಗಳು:** ಮನೆಯ ಹಿರಿಯರು ಸ್ಥೂಲಕಾಯರಾಗಿದ್ದರೆ, ಸಾಮಾನ್ಯವಾಗಿ ಅವರ ಮಕ್ಕಳೂ ಸ್ಥೂಲಕಾಯರಾಗುತ್ತಾರೆ. ಅಲ್ಲದೆ, ಹಿರಿಯರು ಮನೆಯಲ್ಲಿ ಅನುಸರಿಸುವ ಆಹಾರ ಪದ್ಧತಿಯೂ ದೈಹಿಕ ಚಟುವಟಿಕೆಗಳನ್ನು ಕುರಿತಾದ ಅವರ ದೃಷ್ಟಿಕೋನಗಳೂ ಮಕ್ಕಳಲ್ಲಿನ ಈ ಸಮಸ್ಯೆಗೆ ಕಾರಣವಾಗುತ್ತವೆ.
- **ಮಾನಸಿಕ ಕಾರಣಗಳು:** ಮಾನಸಿಕ ಒತ್ತಡ, ಖಿನ್ನತೆ ಮತ್ತು ಇತರ ಭಾವನಾತ್ಮಕ ವಿಷಯಗಳಲ್ಲಿನ ಏರುಪೇರುಗಳು ಮಕ್ಕಳ ಮನಸ್ಸಿನ ಮೇಲೆ ಪರಿಣಾಮವನ್ನು ಬೀರುತ್ತವೆ ಮತ್ತು ಇದರ ಅಡ್ಡಪರಿಣಾಮಗಳು ಅವರ ಆಹಾರ ಪದ್ಧತಿ ಮತ್ತು ಅಭಿರುಚಿಯ ಮೇಲೆ ದುಷ್ಪರಿಣಾಮವನ್ನು ಉಂಟುಮಾಡುತ್ತವೆ ಮತ್ತು ಮಕ್ಕಳು ಅನಾರೋಗ್ಯಕರ ಆಹಾರಗಳತ್ತ ಓಲುತ್ತಾರೆ. ಇವೆಲ್ಲದರ ಅಂತಿಮ ಪರಿಣಾಮ ಸ್ಥೂಲಕಾಯ ಹಾಗೂ ದೇಹದ ತೂಕದಲ್ಲಿ ಹೆಚ್ಚಳ.
- **ಸಾಮಾಜಿಕ ಮತ್ತು ಆರ್ಥಿಕ ಅಂಶಗಳು:** ಕಡಮೆ ಆದಾಯವಿರುವ ಕುಟುಂಬದವರಿಗೆ ಆರೋಗ್ಯಕರ ಆಹಾರದ, ಮನೋರಂಜನೆಯ ಅವಕಾಶಗಳು ಅಷ್ಟಾಗಿ ಇರುವುದಿಲ್ಲ. ತಮ್ಮ ಮಕ್ಕಳ ಆರೋಗ್ಯ ಮತ್ತು ಶಿಕ್ಷಣವನ್ನು ಕುರಿತು ಅವರು ಗಂಭೀರವಾಗಿ ಆಲೋಚಿಸುವುದಿಲ್ಲ. ಆರ್ಥಿಕ ಪರಿಸ್ಥಿತಿಯ ಕಾರಣದಿಂದ ಅವರು ಸುಲಭ ಬೆಲೆಯ ಆದರೆ ಹೆಚ್ಚು ಕ್ಯಾಲೊರಿಗಳಿರುವ ಆಹಾರವನ್ನು ಬಳಸುತ್ತಾರೆ.

**ಬಾಲ್ಯದಲ್ಲಿಯೇ ಬರುವ ಸ್ಥೂಲಕಾಯದ ಪರಿಣಾಮಗಳು:**

ಸ್ಥೂಲಕಾಯವೆಂದರೆ ದೇಹದ ಗಾತ್ರದ ಸಮಸ್ಯೆಯಷ್ಟೇ ಅಲ್ಲ. ಅದು ಮಕ್ಕಳನ್ನು ಅವರ ಬಾಲ್ಯದಲ್ಲಿ ಹಾಗೂ ಅನಂತರದ ಜೀವನದಲ್ಲಿ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ವಿವಿಧ ರೀತಿಯಲ್ಲಿ ಈಡು ಮಾಡುತ್ತದೆ.

**1. ದೈಹಿಕ ಆರೋಗ್ಯದಲ್ಲಿ ಎದುರಾಗುವ ಅಪಾಯಗಳು:**

- ಹಿಂದೆ ಮಕ್ಕಳಲ್ಲಿ ಅಪರೂಪವಾಗಿದ್ದ 2ನೆಯ ಪ್ರಕಾರದ ಮಧುಮೇಹವು ಈಗ ಅವರಲ್ಲಿಯೂ ಸಾಮಾನ್ಯವಾಗಿದೆ.
- ರಕ್ತದೊತ್ತಡ, ಕೊಬ್ಬಿನ ಅಂಶದ ಹೆಚ್ಚಳದಿಂದಾಗಿ, ಅವರಲ್ಲಿ ಮಾನಸಿಕ ತಳಮಳ ಮತ್ತು ಭಾವೋದ್ವೇಗಗಳು ಹೆಚ್ಚಾಗುತ್ತವೆ ಮತ್ತು ಹೃದಯಾಘಾತದ ಸಮಸ್ಯೆಗಳೂ ಕಾಣಿಸಿಕೊಳ್ಳುತ್ತವೆ.
- ಉಸಿರಾಟದ ಸಮಸ್ಯೆಗಳು, ಶ್ವಾಸಕೋಶಗಳಿಗೆ ಸಂಬಂಧಿಸಿದ ರೋಗಗಳು ಬರುತ್ತವೆ ಮತ್ತು ನಿದ್ರಾಭಂಗದಿಂದ ತೊಂದರೆಗಳು ಕೂಡ ಉಂಟಾಗುತ್ತವೆ.
- ದೇಹದ ತೂಕವು ಹೆಚ್ಚಾಗಿ ಮೂಳೆಗಳ ಮತ್ತು ಮಂಡಿಗಳ ಮೇಲೆ ಒತ್ತಡ ಜಾಸ್ತಿಯಾಗಿ ಚಲನೆಯಲ್ಲಿ ಸಮಸ್ಯೆಯುಂಟಾಗುತ್ತದೆ.
- ಹಾರ್ಮೋನುಗಳಲ್ಲಿ ಅಸಮತೋಲವುಂಟಾಗಿ ಮಕ್ಕಳು, ಅದರಲ್ಲಿಯೂ ಹೆಣ್ಣುಮಕ್ಕಳು, ವಯಸ್ಸಿಗೆ ಮೊದಲೇ ಅಧಿಕ ವಯಸ್ಸಾದವರಂತೆ ಕಾಣುತ್ತಾರೆ.

**2. ಮನಸ್ಸಿನ ಮೇಲೆ ಉಂಟಾಗುವ ಪರಿಣಾಮಗಳು:**

ಸಾಮಾನ್ಯವಾಗಿ ಸ್ಥೂಲಕಾಯದ ಮಕ್ಕಳು ಇತರ ಮಕ್ಕಳಿಂದ ಅಪಹಾಸ್ಯಕ್ಕೆ ಈಡಾಗಿ ಸಾಮಾಜಿಕವಾಗಿ ಪ್ರತ್ಯೇಕಿಸಲ್ಪಡುತ್ತಾರೆ, ಆತ್ಮಸ್ಥೈರ್ಯವನ್ನು ಮತ್ತು ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ಇದರಿಂದ ಅವರು ಮಾನಸಿಕ ಆತಂಕ, ಖಿನ್ನತೆಗಳಿಗೆ ಗುರಿಯಾಗಿ ಅವರಿಗೇ ಅರಿವಿಲ್ಲದಂತೆ ಆಹಾರ ಸೇವನೆಯಲ್ಲಿನ ಶಿಸ್ತನ್ನು ಕಳೆದುಕೊಂಡು ಅನಾರೋಗ್ಯಕರ ಆಹಾರಗಳ ಸೇವನೆಗೆ ತೊಡಗುತ್ತಾರೆ. ಇದು ಸಮಸ್ಯೆಯನ್ನು ಮತ್ತಷ್ಟು ಬಿಗಡಾಯಿಸುತ್ತದೆ.

**3. ದೀರ್ಘಕಾಲಿಕ ಪರಿಣಾಮಗಳು:**

ಮಕ್ಕಳ ಸ್ಥೂಲಕಾಯವು ಬಾಲ್ಯ ಮತ್ತು ಹದಿಹರೆಯಕ್ಕಷ್ಟಕ್ಕೇ ಸೀಮಿತವಾಗದೆ, ಅವರ ಮುಂದಿನ ಜೀವನದಲ್ಲಿಯೂ ದುಷ್ಪರಿಣಾಮಗಳನ್ನು ಬೀರುತ್ತವೆ. ವಯಸ್ಕರಲ್ಲಿ ಇದು ಮಧುಮೇಹ, ಹೃದಯಸಂಬಂಧಿ ಕಾಯಿಲೆಗಳು, ಪಾರ್ಶ್ವವಾಯು ಮತ್ತು ಕೆಲವು ವಿಧದ ಕ್ಯಾನ್ಸರ್ ಕಾಯಿಲೆಗಳಿಗೆ ದಾರಿಯನ್ನು ಮಾಡಿಕೊಡುತ್ತವೆ.

**ಚಿಕಿತ್ಸೆಗಳು:**

ಬಾಲ್ಯಾವಸ್ಥೆಯ ಸ್ಥೂಲಕಾಯಕ್ಕೆ ನೀಡಬೇಕಾದ ಚಿಕಿತ್ಸೆಯು ವಿವಿಧ ಪ್ರಕಾರಗಳನ್ನು ಒಳಗೊಂಡಿರಬೇಕು. ಅಂದರೆ, ವೈದ್ಯಕೀಯ, ಪೌಷ್ಟಿಕಾಂಶ, ಮನೋವೈದ್ಯಕೀಯ ಮತ್ತು ವರ್ತನೆಯ ದೃಷ್ಟಿಕೋನಗಳಿಂದ ಚಿಕಿತ್ಸೆಯನ್ನು ನೀಡಬೇಕಾಗಿರುತ್ತದೆ.

**1. ಕೇಂದ್ರಿತ ವರ್ತನಾ ಚಿಕಿತ್ಸೆ:**

ಮಕ್ಕಳಲ್ಲಿ ಸ್ಥೂಲಕಾಯವನ್ನು ತಪ್ಪಿಸಬೇಕಾದರೆ, ಕುಟುಂಬದ ಹಿರಿಯರು ತಮ್ಮ ಜೀವನಶೈಲಿಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಂಡರೆ, ಪರಿಣಾಮವು ಉತ್ತಮವಾಗಿರುತ್ತದೆ. ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡು ಮುಂದುವರಿಯುವುದು, ಮಗುವಿನ ವರ್ತನೆ ಮತ್ತು ಆಹಾರ ಸೇವನೆಯ ಬಗೆಗೆ ಮುತುವರ್ಜಿಯನ್ನು ವಹಿಸುವುದು, ರಚನಾತ್ಮಕ ದೃಷ್ಟಿಕೋನವನ್ನು ಮಗುವಿನ ಮನಸ್ಸಿನಲ್ಲಿ ಮೂಡುವಂತೆ ಮಾಡುವುದು ಈ ಚಿಕಿತ್ಸೆಯಲ್ಲಿ ಬಹಳಷ್ಟು ಸಹಾಯಕವಾಗುತ್ತವೆ.

**2. ಆಹಾರ ಪದ್ಧತಿಯಲ್ಲಿ ಬದಲಾವಣೆಗಳು:**

ಅ) ಸಿಹಿ ಮತ್ತು ಸಂಸ್ಕರಿಸಿದ ಆಹಾರಗಳ ಸೇವನೆಯನ್ನು ಕಡಮೆ ಮಾಡುವುದು.

ಆ) ಹಣ್ಣು, ತರಕಾರಿ, ಕಾಳುಗಳು, ಮತ್ತು ಕಾರ್ಬೋಹೈಡ್ರೇಟುಗಳ ಪ್ರಮಾಣ ಕಡಮೆಯಿದ್ದು ಹೆಚ್ಚು ಪೋಷಕಾಂಶಗಳಿರುವ ಪದಾರ್ಥಗಳ ಸೇವನೆಯನ್ನು ಹೆಚ್ಚು ಮಾಡುವುದು.



ಇ) ಹುಸಿ ಹಸಿವು, ಆಸೆಗಳ ಬಲೆಗೆ ಬೀಳದೆ, ದೇಹಕ್ಕೆ ಅಗತ್ಯವಾದಷ್ಟು ಪ್ರಮಾಣದ ಆಹಾರವನ್ನು ಸೇವಿಸುವುದು

ಇವುಗಳು ಸ್ಥೂಲಕಾಯವನ್ನು ನಿಯಂತ್ರಿಸಲು ಪಥ್ಯಶಾಸ್ತ್ರಜ್ಞರು ಸೂಚಿಸುವ ನಿಯಮಗಳು. ಇವುಗಳನ್ನು ತಪ್ಪದೆ ಪಾಲಿಸಬೇಕು.

**3. ದೈಹಿಕ ಚಟುವಟಿಕೆಗಳಿಗೆ ಉತ್ತೇಜನ:**

ವಿಶ್ವ ಆರೋಗ್ಯ ಸಂಸ್ಥೆಯು 5ರಿಂದ 17ವಯಸ್ಸಿನವರು 60 ನಿಮಿಷಗಳ ಚುರುಕಾದ ದೈಹಿಕ ಚಟುವಟಿಕೆಗಳಲ್ಲಿ ತೊಡಗಬೇಕೆಂದು ಪಾಲಕರಿಗೆ ಮತ್ತು ಶಾಲೆಗಳವರಿಗೆ ಶಿಫಾರಸ್ಸು ಮಾಡಿದೆ. ಶಾಲೆಯವರು ಈ ವಿಷಯದಲ್ಲಿ ನಿರ್ಲಕ್ಷ್ಯವನ್ನು ತೋರಿದರೆ, ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.

**4. ಡಿಜಿಟಲ್ ಆರೋಗ್ಯ ಸಾಧನಗಳು:**

ದೈಹಿಕ ಚಟುವಟಿಕೆಗಳು ಹಾಗೂ ಆಹಾರಸೇವನೆಗಳನ್ನು ಗಮನಿಸಲು ಹಲವಾರು ಆ್ಯಪ್‌ಗಳು ಮತ್ತು ಕೈಗಳಲ್ಲಿ ಧರಿಸಬಹುದಾದ ಸಾಧನಗಳು ದೊರೆಯುತ್ತವೆ. ಅವುಗಳನ್ನು ಬಳಸಬಹುದು. ಮನೆಯಲ್ಲಿ ಹಾಗೂ ಶಾಲೆಗಳಲ್ಲಿ ಮಕ್ಕಳನ್ನು ಓಟ, ಕ್ರೀಡೆ ಮೊದಲಾದ ಚಟುವಟಿಕೆಗಳಲ್ಲಿ ತೊಡಗಿಸಿ, ಅವರಲ್ಲಿ ಆಗುವ ಪ್ರಗತಿಯನ್ನು ಗಮನಿಸುತ್ತಿರಬೇಕು.

**4. ಔಷಧಗಳ ಬಳಕೆ:**

ಗಂಭೀರ ಪ್ರಕರಣಗಳಲ್ಲಿ ವರ್ತನಾ ಚಿಕಿತ್ಸೆಯಿಂದ ನಿರೀಕ್ಷಿತ ಪರಿಣಾಮವನ್ನು ಪಡೆಯಲಾಗದಿದ್ದರೆ ಔಷಧಗಳು ಅನಿವಾರ್ಯವಾಗುತ್ತವೆ. ವೈದ್ಯರು ಸೂಚಿಸಿದ ಪಥ್ಯ ಹಸಿವನ್ನು ಹೆಚ್ಚಿಸಿ, ಪೌಷ್ಟಿಕ ಆಹಾರಗಳತ್ತ ಮಕ್ಕಳ ಮನಸ್ಸನ್ನು ಸೆಳೆಯುತ್ತದೆ. ಅದರಿಂದ ಶರೀರದಲ್ಲಿ ಇನ್ಸುಲಿನ್ ಉತ್ಪಾದನೆಯ ಸಾಮರ್ಥ್ಯವು ಕೂಡ ಹೆಚ್ಚುತ್ತದೆ. ಆದರೆ ಔಷಧ ಸೇವನೆಯಲ್ಲಿ ವೈದ್ಯರ ಸೂಚನೆಯನ್ನು ಚ–ತು ತಪ್ಪದೆ ಅನುಸರಿಸಬೇಕಾದದ್ದು ಅತ್ಯಾವಶ್ಯಕ.

**5. ಸರ್ಕಾರಿ ಅಧಿಕಾರಿಗಳ ಜವಾಬ್ದಾರಿ:**

ಸರ್ಕಾರಿ ಅಧಿಕಾರಿಗಳು ಮತ್ತು ಆರೋಗ್ಯಸೇವೆಯಲ್ಲಿರುವವರು ಈ ಕೆಲವು ನೀತಿಗಳ ಬಗೆಗೆ ಕ್ರಮಗಳನ್ನು ಕೈಗೊಳ್ಳಬೇಕು:

- ಅನಾರೋಗ್ಯವನ್ನುಂಟುಮಾಡುವ ಆಹಾರ ಪದಾರ್ಥಗಳ ಜಾಹಿರಾತುಗಳನ್ನು ಪ್ರತಿಬಂಧಿಸಬೇಕು.
- ಶಾಲೆಗಳಲ್ಲಿ ಮಕ್ಕಳಿಗೆ ನೀಡುತ್ತಿರುವ ಆಹಾರಗಳಲ್ಲಿ ಪೌಷ್ಟಿಕಾಂಶಗಳು ಹೆಚ್ಚಾಗಿ ಇರುವಂತೆ ನೋಡಿಕೊಳ್ಳಬೇಕು.
- ದೈಹಿಕ ಶಿಕ್ಷಣವನ್ನು ಎಲ್ಲಾ ಶಾಲೆಗಳಲ್ಲಿ ಕಡ್ಡಾಯಗೊಳಿಸಬೇಕು.

**8. ಮನೋಚಿಕಿತ್ಸೆ ಮತ್ತು ಸಲಹೆಗಳು:**

ಮಕ್ಕಳ ಭಾವನೆಗಳು ಹಾಗೂ ಮಾನಸಿಕ ಆರೋಗ್ಯಗಳ ಬಗೆಗೆ ಕಾಳಜಿ ಅತ್ಯಗತ್ಯ. ಮಕ್ಕಳ ಮನೋವೈದ್ಯರು ಮಕ್ಕಳ ಮಾನಸಿಕ ಒತ್ತಡವನ್ನು ಕಡಮೆಗೊಳಿಸಲು, ಅವರ ಶರೀರದ ಮಾಟವನ್ನು ಉತ್ತಮಗೊಳಿಸಲು, ಹಾಗೂ ಅವರ ಆರೋಗ್ಯವನ್ನು ಕಾಪಾಡಲು ಕುರಿತು ಪೋಷಕರಿಗೆ ಸೂಕ್ತ ಸಲಹೆ/ಶಿಕ್ಷಣಗಳನ್ನು ನೀಡಬೇಕು.

**ಉಪಸಂಹಾರ:**

ಮಕ್ಕಳ ಸ್ಥೂಲಕಾಯದ ಸಮಸ್ಯೆಗಳಿಗೆ ಮೂಲಕಾರಣ ಜೀವನಶೈಲಿ, ನಗರೀಕರಣ ಮತ್ತು ಅನಾರೋಗ್ಯಕರ ಆಹಾರಕ್ರಮಗಳು. ಈ ಸಮಸ್ಯೆಯು ಸಂಕೀರ್ಣವಾಗಿದ್ದರೂ, ಅದು ಅಪರಿಹಾರ್ಯವಲ್ಲ. ಪೋಷಕರು, ಉಪಾಧ್ಯಾಯರು, ಆರೋಗ್ಯಸೇವೆಯಲ್ಲಿರುವವರು ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿ ಸ್ಥೂಲಕಾಯದ ನಿಯಂತ್ರಣದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಮಕ್ಕಳಲ್ಲಿ ಆರೋಗ್ಯಕರ ಅಭ್ಯಾಸಗಳನ್ನು ಅವರು ಬೆಳಸಬೇಕು. ಹಾಗಾದರೆ, ಈ ಸಮಸ್ಯೆಯನ್ನು ಬಹುತೇಕ ನಿರ್ಮೂಲನೆ ಮಾಡುವುದು ಖಂಡಿತವಾಗಿಯೂ ಸಾಧ್ಯ.

# ದೇಶದ ಪ್ರಗತಿಗೆ ಯುವಜನಾಂಗದ ಸಂಕಲ್ಪ ಮುಖ್ಯ

ತುಮಕೂರು ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಕಲಾಸಂಭ್ರಮ-8 ವಾರ್ಷಿಕ ಹಬ್ಬ ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು "ಕರ್ನಾಟಕದ ಶೈಕ್ಷಣಿಕ ಕ್ಷೇತ್ರದಲ್ಲಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಕೊಡುಗೆ ಅಪಾರ. ಈ ಸಂಸ್ಥೆ ಮಕ್ಕಳಿಗೆ ಕೇವಲ ಶಿಕ್ಷಣ ಮಾತ್ರ ಕೊಡುವುದಿಲ್ಲ ಜೊತೆಗೆ ಸಂಸ್ಕಾರವನ್ನೂ ಕೊಡುತ್ತಿದೆ. ಯಾವುದೇ ದೇಶ ಆರ್ಥಿಕವಾಗಿ ಬಲಿಷ್ಠವಾಗಬೇಕಾದರೆ ಅಲ್ಲಿನ ವಿದ್ಯಾವಂತ ಯುವಸಮುದಾಯ ದೇಶದ ಪ್ರಗತಿಯಲ್ಲಿ ಪಾಲ್ಗೊಳ್ಳಬೇಕು. ಅವರು ಹೆಚ್ಚು ಕುಶಲಕರ್ಮಿಗಳಾದರೆ ದೇಶಕ್ಕೆ ಆರ್ಥಿಕ ಶಕ್ತಿ ದೊರೆಯುತ್ತದೆ. ಇದಕ್ಕೆ ಚೀನಾ ಮತ್ತು ಜಪಾನ್ ದೇಶಗಳ ಪ್ರಗತಿ ನಮ್ಮ ಕಣ್ಮುಂದೆ ಇದೆ. ಅಲ್ಲಿನ ಜಿಡಿಪಿ ಹೆಚ್ಚಿಸುವುದರಲ್ಲಿ ಯುವಜನತೆಯ ಪಾತ್ರ ದೊಡ್ಡದಿದೆ. ಅಂತಹ ಕ್ರಾಂತಿಯನ್ನು ಮಾಡಲು ವಿದ್ಯಾರ್ಥಿಗಳಿಂದ ಸಾಧ್ಯ. ಇವತ್ತು ಹಿಂದುಳಿದ ಮತ್ತು ಮಧ್ಯಮ ವರ್ಗದವರ ಕೊಡುಗೆ ನಮ್ಮ ದೇಶಕ್ಕೆ ಅಪಾರ ಪ್ರಮಾಣದಲ್ಲಿದೆ. ಮುಂದಿನ ದಿನಗಳಲ್ಲಿ ಭಾರತ ವಿಶ್ವದ ಬಲಿಷ್ಠ ಆರ್ಥಿಕ ದೇಶವಾಗುವುದರಲ್ಲಿ ಸಂಶಯವಿಲ್ಲ. ಈ ದೃಷ್ಟಿಯಿಂದ ಶೇಷಾದ್ರಿಪುರಂನ ಶಿಕ್ಷಣ ಸಂಸ್ಥೆ ಅಮೂಲ್ಯವಾದ ಯುವಸಮುದಾಯವನ್ನು ರಾಷ್ಟ್ರಕ್ಕೆ ಕೊಡುಗೆಯಾಗಿ ನೀಡುತ್ತಿದೆ. ಆ ಯುವಜನಾಂಗದ ಜೀವನ ಸುಖಕರವಾಗಿರಲಿ, ಶೇಷಾದ್ರಿಪುರಂನ ಶಿಕ್ಷಣ ಸಂಸ್ಥೆ ಮತ್ತಷ್ಟು ಸಮೃದ್ಧವಾಗಿ ಬೆಳೆಯಲಿ" ಎಂದು ಆಶಿಸಿದರು.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ನಾಡೋಜ ಡಾ. ವೂಡೇ ಪಿ. ಕೃಷ್ಣ ಮಾತನಾಡುತ್ತಾ "ಇತ್ತೀಚಿನ ಆಪರೇಷನ್ ಸಿಂಧೂರ್ ಘಟನೆಯನ್ನು ನೆನಪಿಸಿ, ಇವತ್ತು ನಮ್ಮ ಸೈನಿಕರ ಅರ್ಪಣಾ ಮನೋಭಾವದಿಂದಾಗಿ ಪಾಕಿಸ್ತಾನದ ದಾಳಿಯನ್ನು ಯಶಸ್ವಿಯಾಗಿ ಎದುರಿಸಿದ್ದೇವೆ. ಯುವಜನಾಂಗ ಹೆಚ್ಚು ಹೆಚ್ಚು ವಿಜ್ಞಾನ ಮತ್ತು ತಂತ್ರಜ್ಞಾನ ಬಳಸುತ್ತಿರುವುದು ದೇಶದ ಪ್ರಗತಿಗೆ ಪೂರಕವಾಗಿದೆ. ನಮ್ಮ ಸಂಸ್ಥೆ ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಡುತ್ತಿದೆ" ಎಂದರು.

ಆಡಳಿತ ಮಂಡಳಿಯ ಅಧ್ಯಕ್ಷರಾದ ಡಬ್ಲ್ಯೂ.ಡಿ. ಅಶೋಕ್, ಪ್ರಾಂಶುಪಾಲರಾದ ಡಾ. ಜಿ.ಟಿ. ಜಗದೀಶ. ಪಿ.ಯು. ಕಾಲೇಜಿನ ಪ್ರಾಂಶುಪಾಲರಾದ ಎಚ್.ಬಿ. ಮಹಂತೇಶ್ ಮತ್ತು ಶೇಷಾದ್ರಿಪುರಂ ಶಾಲೆಯ ಪ್ರಾಂಶುಪಾಲರಾದ ಸೌಮ್ಯ ನಂದರಾಜ್ ಅವರುಗಳು ಭಾಗವಹಿಸಿದ್ದರು.

# ಎಐ ತಂತ್ರಜ್ಞಾನದಿಂದ ಔಷಧ ತಯಾರಿಕಾ ವಲಯದಲ್ಲಿ ಹೊಸ ಕ್ರಾಂತಿ

ಔಷಧ ತಯಾರಿಕಾ ವಲಯಕ್ಕೆ ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ತಂತ್ರಜ್ಞಾನದ ಬೆಳವಣಿಗೆಯಿಂದ ವರದಾನವಾಗಿದೆ ಎಂದು ಆದಿಚುಂಚನಗಿರಿ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರು ಮತ್ತು ಡೀನ್ ಡಾ.ಪ್ರಕಾಶ್ ಗೌಡನವರ್‌ರವರು ಅಭಿಪ್ರಾಯಪಟ್ಟಿದ್ದಾರೆ. ನಗರದ ಶಿರಾರಸ್ತೆಯ ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯ ವತಿಯಿಂದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಹಾಗೂ ಔಷಧ ಇಲಾಖೆಗಳ ಸಹಯೋಗದೊಂದಿಗೆ ಕರ್ನಾಟಕದಲ್ಲಿ ಔಷಧ ಆವಿಷ್ಕಾರದಲ್ಲಿ "ಎ.ಐ. ತಂತ್ರಜ್ಞಾನ ಮತ್ತು ಔಷಧ ಅನ್ವೇಷಣೆಯ ಅವಕಾಶಗಳು ಹಾಗೂ ತಂತ್ರಗಳ ಸವಾಲು" ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಶ್ರೀದೇವಿ ಆಸ್ಪತ್ರೆಯ ಆಡಿಟೋರಿಯಂ ಸಭಾಂಗಣದಲ್ಲಿ ಜುಲೈ 14 ರಂದು ಸೋಮವಾರ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.




**ಕರ್ನಾಟಕದಲ್ಲಿ ಔಷಧ ಆವಿಷ್ಕಾರದಲ್ಲಿ "ಎ.ಐ. ತಂತ್ರಜ್ಞಾನ ಮತ್ತು ಔಷಧ ಅನ್ವೇಷಣೆಯ ಅವಕಾಶಗಳು ಹಾಗೂ ತಂತ್ರಗಳ ಸವಾಲು" ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಆದಿಚುಂಚನಗಿರಿ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರು ಮತ್ತು ಡೀನ್ ಡಾ.ಪ್ರಕಾಶ್ ಗೌಡನವರ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್, ಎಂ.ಎಸ್.ಪಾಟೀಲ್, ಡಾ.ರಮಣ್ ಎಂ ಹುಲಿನಾಯ್ಕರ್, ಡಾ.ಪಿ.ಲಾವಣ್ಯ, ಪ್ರೊ.ಟಿ.ವಿ.ಬ್ರಹ್ಮದೇವಯ್ಯ, ಡಾ.ಪ್ರಕಾಶ್‌ಗೌಡನವರ್, ಡಾ.ಲಕ್ಷ್ಮಣ ವಿಜಾಪುರ, ಡಾ.ಮಲ್ಲಪ್ಪಶಲವಡಿ, ಡಾ.ವಾಚಲ.ಎಸ್.ಡಿ., ಡಾ.ಬಿ.ಗೋಪಾಲಕೃಷ್ಣ, ಡಾ.ಶಿವಕುಮಾರ್, ಡಾ.ಜಿ.ಅರ್ಪಿತಾ, ಡಾ.ಕೆ.ಎಸ್.ಶ್ರೀಲತಾ ಹಾಗೂ ಹೆಚ್.ಎ.ರಮೇಶ್.**

ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ.ಪ್ರಕಾಶ್ ಗೌಂಡನವರ್‌ರವರು ಮಾತನಾಡುತ್ತಾ ಔಷಧ ತಯಾರಿಕಾ ವಲಯದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಿಂದ ಬಹಳ ಕಡಿಮೆ ಅವಧಿಯಲ್ಲಿ ಹೊಸ ಔಷಧಗಳನ್ನು ತಯಾರಿಸಬಹುದಾಗಿದೆ. ಭಾರತ ಸೇರಿದಂತೆ ಜಗತ್ತಿನಾದ್ಯಂತ ಕೃತಕ ಬುದ್ಧಿ ಮತ್ತು ನಿಯಂತ್ರಣ ಕಾನೂನುಗಳನ್ನು ಜಾರಿಗೊಳಿಸಬೇಕಿದೆ. ಹೊಸ ಔಷಧಿಗಳನ್ನು ಬಹಳ ಬೇಗ ತಯಾರಿಸಬಹುದಾದರೂ ಪ್ರಯೋಗಗಳನ್ನು ನಿಲ್ಲಿಸಲು ಸಾಧ್ಯವಿಲ್ಲ. ಇದರ ಬಗ್ಗೆ ವಿದ್ಯಾರ್ಥಿಗಳು ಹೆಚ್ಚಿನ ಗಮನಹರಿಸಬೇಕು ಮತ್ತು ಸಂಶೋಧನೆಗೆ ಮುಂದಾಗಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ. ಆರ್. ಹುಲಿನಾಯ್ಕರ್ ಅವರು ಮಾತನಾಡುತ್ತಾ ಭಾರತೀಯ ಔಷಧ ತಯಾರಿಕಾ ವಲಯದ ಶಕ್ತಿ ಸಾಮರ್ಥ್ಯ ಕೋವಿಡ್ ಕಾಲಘಟ್ಟದಲ್ಲಿ ಜಗತ್ತಿಗೆ ಮನವರಿಕೆಯಾಗಿದೆ. 190 ದೇಶಗಳಿಗೆ ಕೋವಿಡ್ ಲಸಿಕೆಯನ್ನು ಭಾರತದಲ್ಲಿ ಉಚಿತವಾಗಿ ಪೂರೈಸಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ಮಾತನಾಡುತ್ತಾ ಔಷಧ ತಯಾರಿಕಾ ವಲಯ ದೊಡ್ಡ ಮಟ್ಟದಲ್ಲಿ ಉದ್ಯೋಗ ನೀಡುತ್ತಿದೆ. ದೇಶದ ಜಿ.ಡಿ.ಪಿ.ಗೆ ಶೇಕಡ ಎರಡರಷ್ಟು ಆದಾಯ ತಂದು ಕೊಟ್ಟಿದೆ. ಕಡಿಮೆ ಅವಧಿಯಲ್ಲಿ ಹೆಚ್ಚು ಉತ್ಪಾದನೆಗೆ ಸಹಕಾರಿಯಾಗಿದೆ. ಹೀಗಾಗಿ ಫಾರ್ಮಸಿ ಕೋರ್ಸ್‌ಗಳಿಗೆ ಭವಿಷ್ಯದಲ್ಲಿ ಬಹಳಷ್ಟು ಬೇಡಿಕೆಯಿದೆ. ಭಾರತೀಯ ಔಷಧ ತಯಾರಿಕಾ ವಲಯ ಕೋವಿಡ್ ಕಾಲಘಟ್ಟದಲ್ಲಿ ಮಾಡಿರುವ ಒಳ್ಳೆಯವನ್ನು ಇಡೀ ವಿಶ್ವವೇ ಮೆಚ್ಚಿಕೊಂಡಿದೆ ಎಂದರು.

ಇದೇ ಸಂದರ್ಭದಲ್ಲಿ ಡಾ. ಪ್ರಕಾಶ್‌ಗೌಡನವರ್, ಬಾಗಲಕೋಟೆಯ ಬಿ.ವಿ.ವಿ.ಎಸ್. ಹೊನಗಲ್ ಶ್ರೀಕುಮಾರೇಶ್ವರ ಫಾರ್ಮಸಿ ಕಾಲೇಜಿನ ಡಾ. ಲಕ್ಷ್ಮಣ ವಿಜಾಪುರ, ಡಾ.ಮಲ್ಲಪ್ಪ ಶಲವಡಿ ಹಾಗೂ ಬೆಂಗಳೂರಿನ ಮಲ್ಲಿಗೆ ಫಾರ್ಮಸಿ ಕಾಲೇಜಿನ ಡಾ. ವಾಚಲ ಎಸ್.ಡಿ. ಅವರನ್ನು ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯ ವತಿಯಿಂದ ಸನ್ಮಾನಿಸಲಾಹಿತು.

ಕಾರ್ಯಕ್ರಮದಲ್ಲಿ ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ ಹುಲಿನಾಯ್ಕರ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಪಿ.ಲಾವಣ್ಯ, ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಪ್ರೊ. ಟಿ.ವಿ. ಬ್ರಹ್ಮದೇವಯ್ಯ, ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಾದ ಡಾ. ಪ್ರಕಾಶ್‌ಗೌಡನವರ್, ಡಾ. ಲಕ್ಷ್ಮಣ ವಿಜಾಪುರ, ಡಾ.ಮಲ್ಲಪ್ಪ ಶಲವಡಿ, ಡಾ. ವಾಚಲ.ಎಸ್.ಡಿ., ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯದ ನಿರ್ದೇಶಕರಾದ ಡಾ. ಬಿ. ಗೋಪಾಲಕೃಷ್ಣ, ಶ್ರೀದೇವಿ ಔಷಧ ವಿಜ್ಞಾನ ಪ್ರಾಂಶುಪಾಲರಾದ ಡಾ. ಶಿವಕುಮಾರ್, ಡಾ. ಜಿ. ಅರ್ಪಿತಾ, ಡಾ. ಕೆ.ಎಸ್. ಶ್ರೀಲತಾ, ಹೆಚ್.ಎ. ರಮೇಶ್ ಹಾಗೂ ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

# ಬೆಂಗಳೂರಿನ ಗಾಂಧಿನಗರದಲ್ಲಿ ಕುರುಬರ ಸಂಘಕ್ಕೆ ನೂತನ ಕಟ್ಟಡ

▶▶ ಮೊದಲನೇ ಪುಟದಿಂದ

ರಾಷ್ಟ್ರಕವಿ ಕುವೆಂಪು ಅವರ ವಿಚಾರ ಕ್ರಾಂತಿಗೆ ಆಹ್ವಾನ ಗ್ರಂಥದಿಂದ ನಾವೆಲ್ಲಾ ಸ್ಫೂರ್ತಿ ಪಡೆಯಬೇಕು.

"ಕಾಗಿನೆಲೆ ಮಹಾಸಂಸ್ಥಾನದ ಪೀಠದವತಿಯಿಂದ ಸಮಾಜಮುಖಿ ಕೆಲಸಗಳಾಗುತ್ತಿರುವುದು ಶ್ಲಾಘನೀಯ. ಇದಕ್ಕೆ ಶ್ರಮಿಸುತ್ತಿರುವ ಜಗದ್ಗುರು ನಿರಂಜನಾನಂದ ಸ್ವಾಮೀಜಿ ಹಾಗೂ ಶಾಖಾಮಠದ ಸ್ವಾಮೀಜಿಗಳನ್ನು ಅಭಿನಂದಿಸುತ್ತೇನೆ. ಮೈಸೂರಿನಲ್ಲಿ ಯಾಂದಳ್ಳಿ ಗ್ರಾಮದಲ್ಲಿ 12 ಎಕರೆ ಜಾಗವನ್ನು ಸಮಾಜಕ್ಕೆ ನೀಡಲಾಗಿದ್ದು ಅಲ್ಲಿ ತ್ವರಿತವಾಗಿ ಭವನ ನಿರ್ಮಾಣ ಮಾಡಲಾಗುವುದು. ಬೆಂಗಳೂರಿನ ಬನಶಂಕರಿಯಲ್ಲಿ ಕಾನೂನು ಕಾಲೇಜು ಮತ್ತು ಕೇಂದ್ರ ಲೋಕಸೇವಾ ಆಯೋಗದ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗಾಗಿ ಕಟ್ಟಡವನ್ನು ಈಗಾಗಲೇ ನಿರ್ಮಿಸಲಾಗಿದೆ. ಬೆಂಗಳೂರಿನ ಗಾಂಧಿನಗರದಲ್ಲಿರುವ ಹಳೆಯ ಕುರುಬರ ಸಂಘವನ್ನು ಒಡೆದು ಹಾಕಲಾಗಿದೆ. ಅಲ್ಲಿ 34 ಕೋಟಿ ರೂ ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಾಣ ಮಾಡಲಾಗುವುದು. ಮೈಸೂರು ಜಿಲ್ಲೆಯಲ್ಲಿ 300 ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ಮತ್ತು ಕೇಂದ್ರ ಲೋಕಸೇವಾ ಆಯೋಗದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲು ಕ್ರಮಕೈಗೊಳ್ಳಲಾಗಿದೆ". ಎಂದರು.

### ಹಿಂದುಳಿದ ಸಮಾಜದ ಮಠಮಾನ್ಯಗಳಿಗೆ ಬೆಂಗಳೂರಿನಲ್ಲಿ ನಿವೇಶನ

ಬೆಂಗಳೂರು ದಕ್ಷಿಣ ತಾಲ್ಲೂಕಿನ ವ್ಯಾಪ್ತಿಯಲ್ಲಿ 80 ಎಕರೆ ಸರ್ಕಾರಿ ಜಮೀನನ್ನು ವಿವಿಧ ಸಮಾಜದ ಮಠಮಾನ್ಯಗಳಿಗೆ ಹಂಚುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ. ಅವರುಗಳಿಗೆ ನಿವೇಶನವನ್ನು ಕೊಡುತ್ತೇವೆ. ವಿವಿಧ ಸಮಾಜದ ಸ್ವಾಮೀಜಿಗಳು ಕೋರಿದಂತೆ ಸಮಾಜದ ಅಭಿವೃದ್ಧಿಗೆ ಅನುದಾನವನ್ನು ನೀಡುವುದನ್ನು ಪರಿಶೀಲಿಸಲಾಗುವುದು ಎಂದು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು.

ಸಮಾರಂಭದಲ್ಲಿ ಕಾಗಿನೆಲೆ ಮಹಾಸಂಸ್ಥಾನದ ಪೀಠಾಧ್ಯಕ್ಷ ಜಗದ್ಗುರು ನಿರಂಜನಾನಂದಪುರಿ ಸ್ವಾಮಿ, ಇಮ್ಮಡಿ ಸಿದ್ಧರಾಮೇಶ್ವರಪುರಿ ಸ್ವಾಮೀಜಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಹೆಚ್ ಎಂ. ರೇವಣ್ಣ, ಸಚಿವರಾದ ಭೈರತಿ ಸುರೇಶ್, ವಿಧಾನಪರಿಷತ್ತಿನ ಸದಸ್ಯರಾದ ಎಚ್. ವಿಶ್ವನಾಥ್, ಮಾಜಿ ಸಚಿವ ಬಂಡೆಪ್ಪ ಕಾಶ್ಯಂಪುರ, ಶಾಸಕರಾದ ಬಸವರಾಜ ಶಿವಣ್ಣ, ತುಮಕೂರಿನ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳ ಸ್ಥಾಪಕ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್, ಮಾಜಿ ಶಾಸಕರಾದ ಆರ್. ಶಂಕರ್, ಶಾಸಕರಾದ ಮಂಜುನಾಥ್, ಶ್ರೀನಿವಾಸ್, ಭೀಮಸೇನ ಚಿಮ್ಮನಕಟ್ಟಿ, ಮೊದಲಾದವರು ಭಾಗವಹಿಸಿದ್ದರು.

# ಭಾರತದ ಆಂಜಿಯೋಪ್ಲ್ಯಾಸ್ಟಿಯ ಪಿತಾಮಹ

## ಡಾ. ಮಾಥ್ಯು ಸ್ಯಾಮುಯೆಲ್ ಕಲರಿಕಲ್

ಹೃದಯಾಘಾತವಾದ ಸನ್ನಿವೇಶದಲ್ಲಿ, ಹೃದಯದ ರಕ್ತನಾಳಗಳಲ್ಲಿ ಸರಾಗವಾಗಿ ರಕ್ತ ಹರಿಯದೆ ಅಡಚಣೆಗಳು ಕಾಣಿಸಿಕೊಂಡಾಗ ತಕ್ಷಣ ವೈದ್ಯರು ಸೂಚಿಸುವುದು ಆಂಜಿಯೋಪ್ಲ್ಯಾಸ್ಟಿಯನ್ನು. ಹಾಗಾದರೆ ಆಂಜಿಯೋಪ್ಲ್ಯಾಸ್ಟಿ ಎಂದರೇನು? ಭಾರತದಲ್ಲಿ ಶಸ್ತ್ರಚಿಕಿತ್ಸಾ ವಿಧಾನ ಯಾವಾಗ ಆರಂಭವಾಯಿತು? ಇದರ ಪಿತಾಮಹ ಯಾರು? ಇದನ್ನು ಜನಪ್ರಿಯಗೊಳಿಸಿದವರು ಯಾರು? ಅವರು ಎಲ್ಲಿಯವರು? ಎಂಬುದು ಹಲವರಿಗೆ ತಿಳಿದಿಲ್ಲ. ಭಾರತದ ವೈದ್ಯರ ಕೀರ್ತಿಪತಾಕೆ ಹೇಗೆ ಪಸರಿಸುತ್ತದೆ ಎಂಬುದಕ್ಕೂ ಇದೊಂದು ಉತ್ತಮ ನಿದರ್ಶನ!

ಭಾರತದಲ್ಲಿ ಎಂಬತ್ತರ ದಶಕದಲ್ಲಿ ಅಂಜಿಯೋಪ್ಲಾಸ್ಟಿ ಎಂಬ ಆಧುನಿಕ ಹೃದಯ ಶಸ್ತ್ರಚಿಕಿತ್ಸೆಯನ್ನು ಪರಿಚಯಿಸಿದ ಶ್ರೇಯಸ್ಸು ಕೇರಳದ ಡಾ. ಮಾಥ್ಯು ಸ್ಯಾಮುಯೆಲ್ ಕಲರಿಕಲ್ (Mathew Samuel Kalarickal) ಅವರಿಗೆ ಸಲ್ಲುತ್ತದೆ. ಕೇವಲ ಭಾರತದ ಮಾತ್ರವಲ್ಲದೆ, ಏಷ್ಯಾ ಖಂಡದ ಹಲವು ರಾಷ್ಟ್ರಗಳಲ್ಲಿ ಇದನ್ನು ಜನಪ್ರಿಯಗೊಳಿಸಿ ಆ ಮೂಲಕ ಲಕ್ಷಾಂತರ ಹೃದ್ರೋಗಿಗಳ ಜೀವ ಉಳಿಸಿದ ಅವರ ಅರಾಧ್ಯದೈವ ಎಂದು ಅವರು ಪ್ರಸಿದ್ಧರಾಗಿದ್ದರು. ಅವರು ದೀರ್ಘಕಾಲೀನ ಅನಾರೋಗ್ಯದ ಅನಂತರ ಕಳೆದ ಏಪ್ರಿಲ್ 18ರಂದು ಚೆನ್ನೈನಲ್ಲಿ ನಿಧನ ಹೊಂದಿದರು.

1948 ಜನವರಿ 6ರಂದು ಜನಿಸಿದ ಡಾ. ಮಾಥ್ಯು ಕೇರಳದ ವೈದ್ಯಕೀಯ ನಗರವೆಂದೇ ಜನಪ್ರಿಯಗೊಂಡಿರುವ ಕೊಟ್ಟಾಯಂ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಪದವಿಯನ್ನು ಪಡೆದು ಕಾರ್ಡಿಯಾಲಜಿಯಲ್ಲಿ ಸ್ನಾತ್ತಕೋತ್ತರ ಪದವಿಯನ್ನು ಗಳಿಸಿ ಅಮೆರಿಕಾದಲ್ಲಿ ಇಂಟ್ರವೆನ್ಷನ್ ಕಾರ್ಡಿಯಾಲಜಿ ಪಿತಾಮಹ ಎಂದೇ ಹೆಸರಾಗಿದ್ದ ಆಂಡ್ರಿಯಾಸ್ ರೊಲ್ಯಾಂಡ್ (Andreas Roland Grüntzig) ಅವರ ಬಳಿ ತರಬೇತಿ ಪಡೆದು ಅನಂತರ 1985ರಲ್ಲಿ ಭಾರತಕ್ಕೆ ಹಿಂದಿರುಗಿದರು. ಆ ಸಂದರ್ಭದಲ್ಲಿ ಅಂಜಿಯೋಪ್ಲಾಸ್ಟಿ ಚಿಕಿತ್ಸೆಯಲ್ಲಿ ಅಮೆರಿಕಾ, ಯುರೋಪ್ ದೇಶಗಳಿಗೆ ಹೋಲಿಸಿದರೆ, ಭಾರತವು ಬಹಳ ಹಿಂದುಳಿದಿತ್ತು.

ಡಾ. ಮ್ಯಾಥ್ಯೂ ಅವರು ಈ ಸಂದರ್ಭದಲ್ಲಿ ದೇಶದಲ್ಲಿ ಆಂಜಿಯೋಪ್ಲಾಸ್ಟಿ ಚಿಕಿತ್ಸೆ ನೀಡಲು ಆರಂಭಿಸಿದರು. ಮೊದಲ ವರ್ಷ 1986ರಲ್ಲಿ 18 ರೋಗಿಗಳಿಗೆ ಈ ಚಿಕಿತ್ಸೆಯನ್ನು ಮಾಡಿದ್ದರೆ ಅನಂತರ ವರ್ಷದಿಂದ ವರ್ಷಕ್ಕೆ ರೋಗಿಗಳ ಸಂಖ್ಯೆ ಏರುತ್ತಾ ಹೋಯಿತು. ಆರಂಭದಲ್ಲಿ ಹಲವು ಅಡೆತಡೆಗಳು ಉಂಟಾದರೂ ಚಿಕಿತ್ಸಾ ವಿಧಾನ ಅತ್ಯಂತ ಜನಪ್ರಿಯಗೊಂಡಿತು ಎಂದು ನಿಯತಕಾಲಿಕೆಗೆ ನೀಡಿದ್ದ ಸಂದರ್ಶನಲ್ಲಿ ಅವರು ಹೇಳಿದ್ದರು. ಭಾರತದ ಹೃದಯ ರೋಗಿಗಳಿಗೆ ಅಂಜಿಯೋಪ್ಲಾಸ್ಟಿ ಶಸ್ತ್ರಚಿಕಿತ್ಸೆ ನೀಡುವುದು ತಮ್ಮ ನೈತಿಕ ಹೊಣೆ ಹಾಗೂ ಬದ್ಧತೆಯಾಗಿದೆ ಎಂದು ಬಲವಾಗಿ ಅವರು ನಂಬಿದ್ದರು. ಬೈಪಾಸ್ ಸರ್ಜರಿ ಹೊರತಾಗಿ ರೋಗಿಗಳಿಗೆ ಅನ್ಯಮಾರ್ಗವಿಲ್ಲದ ಸನ್ನಿವೇಶದಲ್ಲಿ ಈ ಚಿಕಿತ್ಸೆಯು ಭಾರತದ ಹೃದಯ ರೋಗಿಗಳಿಗೆ ವರದಾನವಾಗುವ ರೀತಿಯಲ್ಲಿ ಅದನ್ನು ಅಭಿವೃದ್ಧಿ ಪಡಿಸಿದ್ದರು.

ದೇಶದಲ್ಲಿ ಸಾವಿರಾರು ರೋಗಿಗಳಿಗೆ ಹೊಸ ಚಿಕಿತ್ಸಾ ವಿಧಾನದ ಮೂಲಕ ಚಿಕಿತ್ಸೆಯನ್ನು ಕಲ್ಪಿಸಿ ಅವರ ಆರೋಗ್ಯ ಸುಧಾರಿಸಲು ನೆರವಾಗಿದ್ದು ಅವರ ವೃತ್ತಿಜೀವನದ ಅತಿದೊಡ್ಡ ಸಾಧನೆಯಾಗಿದ್ದು, ಹಣದಿಂದ ಗಳಿಸಲು ಸಾಧ್ಯವಾಗದ ತೃಪ್ತಿ, ಸಮಾಧಾನ ಇಂತಹ ಸೇವೆಯಿಂದ ಗಳಿಸುವುದು ಸಾಧ್ಯವೆಂಬ ಸಂತಸವನ್ನು ಅವರು ವ್ಯಕ್ತಪಡಿಸಿದ್ದರು.

ರೋಗಿಗಳಿಗೆ ಚಿಕಿತ್ಸೆಯನ್ನು ನೀಡುವುದು ಮಾತ್ರವಲ್ಲದೆ, ದೇಶಾದ್ಯಂತ ಸಂಚರಿಸಿ ಹೃದ್ರೋಗ ವೈದ್ಯರಿಗೆ ತರಬೇತಿ ಹಾಗೂ ಶಿಕ್ಷಣಗಳನ್ನು ಅವರು ನೀಡಿದರು. ನಮ್ಮ ನೆರೆಯ ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ ಯುಎಇ, ಮಸ್ಕತ್, ಇಂಡೋನೇಷಿಯಾ, ಥೈಲ್ಯಾಂಡ್, ಮಲೇಶಿಯಾ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಆಂಜಿಯೋಪ್ಲಾಸ್ಟಿ ಚಿಕಿತ್ಸೆಯನ್ನು ಜನಪ್ರಿಯಗೊಳಿಸಲು ಮತ್ತು ಅಭಿವೃದ್ಧಿಪಡಿಸಲು ನಿರಂತರ ಶ್ರಮಿಸಿದ್ದರು. ಡಾ. ಮ್ಯಾಥ್ಯೂ ಅವರಿಂದ ತರಬೇತಿ ಪಡೆದ ಚೆನ್ನೈನ ಅಪೊಲೊ ಆಸ್ಪತ್ರೆಯ ಇಂಟರ್ವೆನ್ಷನ್ ಕಾರ್ಡಿಯಾಲಜಿಸ್ಟ್ ಡಾ. ಸಾಯಿ ಸತೀಶ್ ತಮ್ಮ ಜೀವನದಲ್ಲಿ ಮತ್ತೊಬ್ಬ ಕಲರಿಕಲ್ ಹುಟ್ಟಿ ಬರುವುದನ್ನು ನಿರೀಕ್ಷಿಸಲು ಸಾಧ್ಯವಿಲ್ಲ, ಅವರು ನೀಡಿದ ತರಬೇತಿ, ಮಾರ್ಗದರ್ಶನ ನನ್ನ ವೃತ್ತಿಜೀವನದಲ್ಲಿ ಮಾರ್ಗದರ್ಶಿ ದೀಪವಾಗಿದೆ. ಕ್ಯಾಥ್‌ಲ್ಯಾಬ್ ಪ್ರವೇಶಿಸುವ ಪ್ರತಿ ಸಂದರ್ಭದಲ್ಲೂ ನಾನು ಅವರನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ ಎಂಬ ನೋವು ನಿರಂತರವಾಗಿ ನನ್ನನ್ನು ಕಾಡುತ್ತಿದೆ ಎಂದು ಹೇಳಿದ್ದಾರೆ.

ಡಾ. ಕಲರಿಕಲ್, ಭಾರತದಲ್ಲಿ ಮೊಟ್ಟ ಮೊದಲ ಅಂಜಿಯೋಪ್ಲಾಸ್ಟಿ ಶಸ್ತ್ರಚಿಕಿತ್ಸೆ ನಡೆಸಿದ್ದು ಮುಂಬೈನ ಸುಪ್ರಸಿದ್ಧ ವಕೀಲ ಸಿ.ಎಸ್. ಲೋಧಾ ಅವರಿಗೆ. ಅನಂತರ ಅವರಿಬ್ಬರೂ ಆತ್ಮೀಯ ಗೆಳಯರಾಗಿದ್ದರು. ಅನಂತರ ದೇಶದಲ್ಲಿ ಅಂಜಿಯೋಪ್ಲಾಸ್ಟಿ ಚಿಕಿತ್ಸಾವಿಧಾನದಲ್ಲಿ ಅವರನ್ನು ಮೀರಿಸಿದವರೇ ಇರಲಿಲ್ಲ ಎನ್ನಬಹುದು. ಮುಂದಿನ ಮೂರು ದಶಕಗಳ ಕಾಲ ಅವರು ತಮ್ಮ ವೃತ್ತಿಯಲ್ಲಿ ಹಿಂತಿರುಗಿ ನೋಡಿದ ಪ್ರಸಂಗವೇ ಇಲ್ಲ. ವೃತ್ತಿನೈಪುಣ್ಯದ ವಿಷಯದಲ್ಲಿ ಭಾರತದಲ್ಲಾಗಲಿ, ದಕ್ಷಿಣ ಏಷ್ಯಾದೇಶಗಳಲ್ಲಿ ಆಗಲಿ ಅವರ ಹತ್ತಿರಕ್ಕೂ ಸುಳಿಯುವ ವೈದ್ಯರು ಕೂಡ ಇರಲಿಲ್ಲ ಎಂದರೆ ಅವರು ತಮ್ಮ ವೃತ್ತಿಯಲ್ಲಿ ಯಾವ ಮಟ್ಟದ ಪರಿಪೂರ್ಣತೆ ಹೊಂದಿದ್ದರು ಎಂಬುದು ಸ್ಪಷ್ಟವಾಗಿದೆ.

ಡಾ. ಕಲರಿಲ್ ಜನಪ್ರಿಯತೆ ಎಲ್ಲಿಗೆ ತಲುಪಿತು ಎಂದರೆ ವಿಐಪಿಗಳು ಸೇರಿದಂತೆ ದೇಶದ ಜನರ ನಾಲಿಗೆಯ ಮೇಲೆ ಅವರ ಹೆಸರು ನಿತ್ಯವೂ ನಲಿದಾಡುವಂತಾಯಿತು. ಇಂಟರ್ವೆನ್ಷನಲ್ ಕಾರ್ಡಿಯಾಲಜಿ ಕ್ಯಾಥೆಟರ್ ಎಂದು ಕರೆಯಲ್ಪಡುವ ಸಣ್ಣ ಟ್ಯೂಬ್‌ಗಳನ್ನು ಬಳಸಿಕೊಂಡು ಹೃದಯ ಮತ್ತು ರಕ್ತನಾಳಗಳ ಪರಿಸ್ಥಿತಿಯನ್ನು ಪತ್ತೆ ಹಚ್ಚುವ ಚಿಕಿತ್ಸೆಯನ್ನು ನೀಡುವುದು ಇವರ ವಿಶೇಷತೆಯಾಗಿತ್ತು.

■ ನಿರೂಪಣೆ: ಕೆ.ಎಸ್. ರಾಜಮನ್ನಾರ್



### ಆಂಜಿಯೋಪ್ಲ್ಯಾಸ್ಟಿ ಎಂದರೇನು?

**ಅಪಧಮನಿಗಳಲ್ಲಿ ರಕ್ತದ ಸಂಚಾರದಲ್ಲಿ ಉಂಟಾಗುವ ಅಡಚಣೆಯನ್ನು ಆಂಜಿಯೋಪ್ಲ್ಯಾಸ್ಟಿ ತಂತ್ರದ ಸಹಾಯದಿಂದ ಚಿಕಿತ್ಸೆಯನ್ನು ನೀಡಲಾಗುತ್ತದೆ. ಇದರಿಂದ ಅಡಚಣೆಗೊಳಗಾದ ಹೃದಯದ ರಕ್ತ ಪರಿಚಲನೆಯು ಸುಗಮವಾಗುತ್ತದೆ. ಆಂಜಿಯೋಪ್ಲ್ಯಾಸ್ಟಿಯಲ್ಲಿ, ಕ್ಯಾಥೆಟರ್ ಎಂಬ ಸಣ್ಣ ಟ್ಯೂಬನ್ನು ಅಡಚಣೆಯುಂಟಾಗಿರುವ ಅಪಧಮನಿಯೊಳಗೆ ಸೇರಿಸಿ ಅದರ ತುದಿಯಲ್ಲಿ ಒಂದು ಬಲೂನನ್ನು ಇರಿಸಲಾಗುತ್ತದೆ. ಬಲೂನನ್ನು ರಕ್ತಸಂಚಾರಕ್ಕೆ ಅಡಚಣೆಯಿರುವ ಆ ಸ್ಥಳಕ್ಕೆ ತಂದು ಅದರಲ್ಲಿರುವ ಗಾಳಿಯನ್ನು ಹೊರತೆಗೆಯಲಾಗುತ್ತದೆ. ಈ ಪ್ರಕ್ರಿಯೆಯು ಅಪಧಮನಿಗಳನ್ನು ವಿಸ್ತರಿಸಿ, ರಕ್ತದ ಹರಿವು ಹೆಚ್ಚಾಗುವಂತೆ ಮಾಡುತ್ತದೆ. ಅಪಧಮನಿಯನ್ನು ತೆರೆಯಲು ಮತ್ತು ಮತ್ತೆ ಅದು ಕಿರಿದಾಗದಂತೆ ತಡೆಯಲು ಸಣ್ಣ ಸ್ಟೆಂಟನ್ನು (ಟ್ಯೂಬನ್ನು) ಅಳವಡಿಸಲಾಗುತ್ತದೆ. ಇದಕ್ಕೆ ಆಂಜಿಯೋಪ್ಲ್ಯಾಸ್ಟಿ ಎಂದು ಹೆಸರು.**

### ಡಾ. ಕಲರಿಲ್ ಅವರನ್ನು ಅರಸಿಬಂದ ಪ್ರಶಸ್ತಿಗಳು:

- **1996** – ಇಂಟರ್ವೆನ್ಷನಲ್ ಕಾರ್ಡಿಯಾಲಜಿ ಯಲ್ಲಿ ‘ಡಾ. ಬಿ.ಸಿ. ರಾಯ್ ಪ್ರಶಸ್ತಿ’
- **2000** – ಭಾರತ ಸರ್ಕಾರದಿಂದ ‘ಪದ್ಮಶ್ರೀ ಪ್ರಶಸ್ತಿ’
- **2000** – ‘ರಾಷ್ಟ್ರೀಯ ಸಮ್ಮಾನ್’ (ಉನ್ನತತೆರಿಗೆ ಪಾವತಿದಾರರ ಪ್ರಶಸ್ತಿ)
- **2003** – ಡಾ. ಎಂಜಿಆರ್ ವಿಶ್ವವಿದ್ಯಾಲಯದಿಂದ ‘ಡಾಕ್ಟರ್‌ಆಫ್ ಸೈನ್ಸ್ ಪ್ರಶಸ್ತಿ.’

# ಯುವಜನತೆಯ ಉತ್ತಮ ಭವಿಷ್ಯಕ್ಕೆ ಕೌಶಲವೇ ಬುನಾದಿ

“ಅದೊಂದು ಕಾಲ ಪದವಿ ಪಡೆದರೆ ಸಾಕು ಉದ್ಯೋಗ ದೊರಕುತ್ತಿತ್ತು ಆದರೆ ಇಂದು ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಇಂದು ಹೆಚ್ಚು-ಹೆಚ್ಚು ಕೌಶಲ ರೂಢಿಸಿಕೊಂಡರೆ ಅವಕಾಶಗಳು ತಾನಾಗಿಯೇ ಲಭ್ಯವಾಗಲಿದೆ ಈ ನಿಟ್ಟಿನಲ್ಲಿ ಯುವ ಜನಾಂಗ ಗಮನ ಹರಿಸಬೇಕು.” ಜೂನ್ 24 ರಂದು ಶ್ರೀದೇವಿ ಪದವಿ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದ 20ನೇ ವಾರ್ಷಿಕೋತ್ಸವ ಅಂಗವಾಗಿ ಏರ್ಪಡಿಸಿದ್ದ ಸಮಾರಂಭದ ಮುಖ್ಯ ಅತಿಥಿಯಾಗಿದ್ದ ಕಾಲೇಜಿನ ಮೆಡಿಕಲ್ ಡೈರೆಕ್ಟರ್ ಡಾ. ರಮಣ್ ಹುಲಿನಾಯ್ಕರ್ ಈ ಮಾತು ಹೇಳಿದ್ದಾರೆ. ಅವರು ತಮ್ಮ ಮಾತು ಮುಂದುವರಿಸುತ್ತಾ “ಸಾಮಾಜಿಕ ಜಾಲತಾಣಗಳ (ಸೋಷಿಯಲ್ ಮೀಡಿಯಾ) ದಾಸರಾಗಬೇಡಿ ಮತ್ತು ಹೆಚ್ಚಿನ ಸಮಯವನ್ನು ಅದರಲ್ಲೇ ಕಳೆಯಬೇಡಿ. ಕಾಲೇಜಿನ ಪಾಠದ ಕಡೆ ಹೆಚ್ಚು ಗಮನ ಕೊಡಬೇಕು ಭವಿಷ್ಯದ ಸವಾಲು ಎದುರಿಸುವಂತಹ ಕೌಶಲವನ್ನು ವೃದ್ಧಿಸಿಕೊಳ್ಳಬೇಕು. ಶಾಲಾ, ಕಾಲೇಜು ತೊರೆದವರು ಸಹ ಸಾಫ್ಟ್‌ವೇರ್ ಸೇರಿದಂತೆ ಅನೇಕ ಉದ್ಯಮ ಸಾಮ್ರಾಜ್ಯಗಳನ್ನು ಕಟ್ಟಿ ಬೆಳೆಸಿದ್ದಾರೆ ಎಂದರೆ ಬದುಕಿನಲ್ಲಿ ಕೌಶಲಕ್ಕೆ ಎಂತಹ ಬೆಲೆ, ಗೌರವ ಮತ್ತು ಮಾನ್ಯತೆ ದೊರೆಯಲಿದೆ ಎಂಬುದನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ಬದುಕಿನಲ್ಲಿ ಮಹತ್ತ್ವದ ಸಾಧನೆ ಮಾಡಲು ಛಲಬೇಕು”ಎಂದರು.



**ಬಂಡವಾಳ ಹೂಡಿಕೆಯ ಮೆಚ್ಚಿನ ತಾಣ:**

“ರಾಜ್ಯದಲ್ಲಿ ತುಮಕೂರು ಜಿಲ್ಲೆ ಬಂಡವಾಳ ಹೂಡಿಕೆಗೆ ಮೆಚ್ಚಿನ ತಾಣವಾಗಿದೆ. ಇದರ ಜೊತೆಗೆ ಇಲ್ಲಿ ನುರಿತ ಮಾನವಸಂಪನ್ಮೂಲ ಲಭ್ಯವಾಗುತ್ತಿರುವುದರಿಂದ ಕೈಗಾರಿಕಾ ಬೆಳವಣಿಗೆಗೆ ಉತ್ತಮ ಪರಿಸರವಿದೆ. ಮುಂಬರುವ ವರ್ಷಗಳಲ್ಲಿ ದೇಶಿಯ ಮತ್ತು ವಿದೇಶೀ ಕಂಪನಿಗಳು ಇಲ್ಲಿ ತಮ್ಮ ಉತ್ಪಾದನಾ ಘಟಕಗಳನ್ನು ಆರಂಭಿಸಲಿದ್ದು ಇದರಿಂದ ಸ್ಥಳೀಯ ಯುವಕರಿಗೆ ದೊಡ್ಡ ಮಟ್ಟದ ಉದ್ಯೋಗ ಲಭ್ಯವಾಗಲಿದೆ ಮತ್ತು ಭಾರಿ ಬಂಡವಾಳ ಹರಿದುಬರಲಿದೆ” ಐಟಿ ಡೈರಕ್ಟರ್ ಎಂ. ಎಸ್. ಪಾಟೀಲ್ ಅಭಿಪ್ರಾಯಪಟ್ಟರು.

“ಅಧ್ಯಾತ್ಮ ಎಂದರೆ ಅಂತರಂಗ ಶುದ್ಧಿ. ಜಗತ್ತು ಸರಿಯಾದ ಹಾದಿಯಲ್ಲಿ ನಡೆಯಬೇಕು. ಪಾಪ, ವಂಚನೆ, ಮೋಸ ಇಲ್ಲದ ಸಮಾಜ ಇರಬೇಕು ಎನ್ನುವುದೇ ಧರ್ಮ. ಮೊಬೈಲ್ ಬಂದ ಮೇಲೆ, ಸೋಷಿಯಲ್ ಮೀಡಿಯಾಗಳ ಹಾವಳಿ ಹೆಚ್ಚಾದ ನಂತರ ಬಹಳಷ್ಟು ಜನರ ಆರೋಗ್ಯ ಹದಗೆಟ್ಟಿದೆ. ಇಂತಹ ಚಟಗಳಿಂದ ದೂರ ಇರುವುದನ್ನು ಕಲಿತರೆ ಒಳ್ಳೆಯದು” ಎಂದು ಡಾ. ರಮಾನಂದ ಸ್ವಾಮೀಜಿ ಅವರು ಹೇಳಿದರು. ಅನಂತರ ವಿದ್ಯಾರ್ಥಿಗಳ ಹತ್ತು ಹಲವು ಪ್ರಶ್ನೆಗಳಿಗೆ ಉತ್ತರ ನೀಡಿ ಕಾಲೇಜು ವಾರ್ಷಿಕೋತ್ಸವ ದಿನಾಚರಣೆಗೆ ಮೆರಗು ನೀಡಿದರು.

ಅದೇ ದಿನ ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಡು, ನೃತ್ಯ ಹೊಸ ಲೋಕ ಸೃಷ್ಟಿಸಿದ್ದರು. ವಿದ್ಯಾರ್ಥಿಗಳು ತಮ್ಮಲ್ಲಿನ ಕಲಾಪ್ರತಿಭೆಯನ್ನು ಹೊರಜಗತ್ತಿಗೆ ಅನಾವರಣಗೊಳಿಸಿದರು. ಇದೇ ಸಂದರ್ಭದಲ್ಲಿ ಹೆಚ್ಚು ಅಂಕ ಪಡೆದ ಮತ್ತು ಕ್ರೀಡಾ ಚಟುವಟಿಕೆಯಲ್ಲಿ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರಶಂಸನಾ ಪತ್ರ ನೀಡಿ ಗೌರವಿಸಲಾಯಿತು.

■ ವರದಿ: ಎನ್. ಆನಂದ

# ಇಳಿವಯಸ್ಸಿನವರಲ್ಲಿ 'ವಿಟಮಿನ್-ಡಿ' ಪಾತ್ರ



▪ ಡಾ. ಬಿ.ಆರ್. ಸ್ವಾಮಿ
ಹಿರಿಯ ವೈದ್ಯರು, ಕೆನಡಾ
Dr.brswamy@gmail.com

2026ರ ವೇಳೆಗೆ, 65ವರ್ಷವನ್ನು ದಾಟಿದ ವೃದ್ಧರ ಸಂಖ್ಯೆ 2012ರಲ್ಲಿ ಇದ್ದುದಕ್ಕಿಂತ ಎರಡು ಪಟ್ಟು ಹೆಚ್ಚಾಗುವ ನಿರೀಕ್ಷೆಯಿದೆ. ಸಾಮಾನ್ಯವಾಗಿ ವಿಟಮಿನ್-ಡಿ ಮೂಳೆಗಳ ಸ್ವಾಸ್ಥ್ಯದ ವಿಷಯದಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ ಎಂದು ಬಹಳ ಕಾಲದಿಂದ ಭಾವಿಸಲಾಗುತ್ತಿದೆ. ಹೀಗಿದ್ದರೂ, ನಮ್ಮ -ಅದರಲ್ಲಿಯೂ ವಯಸ್ಸಾದವರ- ನರವ್ಯವಸ್ಥೆಯಲ್ಲಿ ಈ ವಿಟಮಿನ್‌ನ ಗ್ರಾಹಕಗಳ ಪತ್ತೆಯಾದ ಅನಂತರ, ವಿಟಮಿನ್-ಡಿಯು ಹೃದಯ ಮತ್ತು ರಕ್ತನಾಳಗಳು, ಅಂತಃಸ್ರಾವಕಗಳ ವ್ಯವಸ್ಥೆ, ಹಾಗೂ ನಮ್ಮ ಒಟ್ಟಾರೆ ಆರೋಗ್ಯ ಇವುಗಳ ಮೇಲೆ ಇನ್ನೂ ಹೆಚ್ಚಿನ ಪ್ರಭಾವವನ್ನು ಬೀರಬಹುದು ಎಂಬುದರ ಮೇಲೆ ಇತ್ತೀಚೆಗೆ ಸಂಶೋಧನೆಗಳ ಗಮನವು ಕೇಂದ್ರೀಕೃತವಾಗುತ್ತಿದೆ. ವಯಸ್ಸಾದವರಲ್ಲಿ, ಚರ್ಮದ ಸಂಶ್ಲೇಷಣೆಯ ಕೊರತೆ, ಸೇವಿಸುವ ಆಹಾರದ ಪ್ರಮಾಣದಲ್ಲಿ ಇಳಿತ, ಹಾಗೂ ಮನೆಯಿಂದಾಚೆ ಕಳೆಯುವ ಸಮಯದಲ್ಲಿನ ಇಳಿಕೆ ಇವುಗಳ ಪರಿಣಾಮವಾಗಿ ಡಿ-ವಿಟಮಿನ್ನಿನ ಕೊರತೆಯುಂಟಾಗುತ್ತದೆ. ವಯಸ್ಸಾದವರಲ್ಲಿ ಕಂಡುಬರುವ ಇಂದ್ರಿಯಗಳ ಪಟುತ್ವದಲ್ಲಿ ಇಳಿಕೆ, ಖಿನ್ನತೆ, ಮೂಳೆಗಳಲ್ಲಿ ಉಂಟಾಗುವ ರಂಧ್ರಗಳು, ಹೃದಯದ ರಕ್ತನಾಳಗಳಲ್ಲಿನ ತೊಂದರೆ, ಅಧಿಕ ರಕ್ತದೊತ್ತಡ, 2ನೆಯ ಮಾದರಿಯ ಮಧುಮೇಹ, ಕ್ಯಾನ್ಸರ್ ಮೊದಲಾದವುಗಳಿಗೆ ವಿಟಮಿನ್-ಡಿಯ ಕೊರತೆಯು ಬಹುಮಟ್ಟಿಗೆ ಕಾರಣವಾಗುತ್ತದೆ ಎಂಬುದನ್ನು ಕೂಡ ಸಂಶೋಧನೆಗಳು ಸೂಚಿಸುತ್ತವೆ. ಈ ಪರಿಸ್ಥಿತಿಯನ್ನು ವಿಟಮಿನ್-ಡಿಯ ಕೊರತೆಯನ್ನು ನಿವಾರಿಸಲು ನೀಡಬಹುದಾದ ಪೂರಕ ಔಷಧಗಳು ತಡೆಯಬಹುದೇ ಅಥವಾ ಕಡಮೆ ಮಾಡಬಹುದೇ ಎಂಬುದನ್ನು ಕುರಿತ ಕ್ಲಿನಿಕಲ್ ಪ್ರಯೋಗಗಳು ನಡೆಯುತ್ತಿವೆ.

**ಮಾನವನ ಆರೋಗ್ಯ ಹಾಗೂ ವಿಟಮಿನ್ ಡಿ:**

ನಮ್ಮ ಶಾರೀರಿಕ ಪ್ರಕ್ರಿಯೆಗಳಲ್ಲಿ ವಿಟಮಿನ್‌ಡಿಯು ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಮೂಳೆಗಳ ಸ್ವಾಸ್ಥ್ಯವನ್ನು ಕಾಪಾಡುವುದರ ಜೊತೆಗೆ, ದೀರ್ಘಕಾಲದ ರೋಗಗಳನ್ನು ತಡೆಗಟ್ಟಲು ಅವು ವಹಿಸುವ ಪ್ರಾಮುಖ್ಯವನ್ನು ಈಚಿನ ಸಂಶೋಧನೆಗಳು ಎತ್ತಿ ಹಿಡಿದಿವೆ. ವಯಸ್ಸಾದವರಲ್ಲಿ ಆಗುವ ಶಾರೀರಿಕ ಬದಲಾವಣೆಗಳು ಮತ್ತು ಜೀವನ ರೀತಿಯ ಕಾರಣಗಳಿಂದಾಗಿ ಅವರಲ್ಲಿ ಶೇ. 20ರಿಂದ ಶೇ. 100ರವರೆಗೆ ಈ ವಿಟಮಿನ್ನಿನ ಕೊರತೆ ಇರುವ ಸಂಭವವಿರುತ್ತದೆ. ಜಗತ್ತಿನಲ್ಲೆಡೆ ವಯಸ್ಸಾದವರ ಪ್ರಮಾಣ ಹೆಚ್ಚುತ್ತಿರುವುದರಿಂದ ವಿಟಮಿನ್ ಡಿ ಹಾಗೂ ದೀರ್ಘಕಾಲದ ರೋಗಗಳ ನಡುವಿನ ಸಂಬಂಧವನ್ನು ಇನ್ನೂ ಆಳವಾಗಿ ಪರಿಶೀಲಿಸುವುದು ಬಹಳ ಮುಖ್ಯವಾಗುತ್ತಿದೆ.

**ವಯಸ್ಸಾದವರ ಮಾನಸಿಕತೆ ಮತ್ತು ಇಂದ್ರಿಯಗಳ ಪಟುತ್ವದಲ್ಲಿನ ಇಳಿಕೆ:**

ಅಮೆರಿಕದ 65 ವರ್ಷ ಅಥವಾ ಅದಕ್ಕಿಂತ ಹೆಚ್ಚು ವಯಸ್ಸಾದವರಲ್ಲಿ ಶೇಕಡ 25ರಷ್ಟು ಮಂದಿಗೆ ಇಂದ್ರಿಯಗಳ ಪಟುತ್ವದಲ್ಲಿ ಇಳಿಕೆಯು ವಿವಿಧ ಹಂತಗಳಿಂದ ಮೊದಲುಗೊಂಡು ಇಚ್ಛಿತ್ತದವರೆಗೆ ಕಂಡುಬರುತ್ತವೆ. ವಿಟಮಿನ್-ಡಿಯ ಗ್ರಾಹಕಗಳು ಮಿದುಳಿನಲ್ಲಿ ಇದ್ದು, ಅವು ಮನುಷ್ಯನ ಗ್ರಹಣಶಕ್ತಿ ಅವನ ಮನಃಸ್ಥಿತಿಯನ್ನು ನಿಯಂತ್ರಿಸುತ್ತಿರುತ್ತವೆ ಮತ್ತು ಈ ವಿಟಮಿನ್ನಿನ ಕೊರತೆಯು ಗ್ರಹಣಶಕ್ತಿಯ ಅವನತಿಯ ವೇಗವನ್ನು ಹೆಚ್ಚು ಮಾಡುತ್ತದೆ.

70ರಿಂದ 79 ವರ್ಷದೊಳಗಿನ 2777 ಮಂದಿಯ ಆರೋಗ್ಯ, ವೃದ್ಧಾಪ್ಯದಿಂದ ಮಾನಸಿಕತೆ ಮತ್ತು ಶಾರೀರಿಕ ಸ್ಥಿತಿಗಳನ್ನು ಅಧ್ಯಯನ ಮಾಡಿದಾಗ, ಅವರಲ್ಲಿ ವಿಟಮಿನ್-ಡಿಯ ಮಟ್ಟವು ಮಿಲಿಲೀಟರ್‌ಗೆ 30 ನ್ಯಾನೋಗ್ರಾಮ್ ಇದ್ದುದು ಕಂಡು ಬಂದಿತು. ಹೀಗೆ ವಿಟಮಿನ್-ಡಿಯ ಮಟ್ಟವು ಕಡಮೆ ಇದ್ದವರಲ್ಲಿ, ಇಂದ್ರಿಯಗ್ರಹಣ ಶಕ್ತಿಯ ಮಟ್ಟವೂ ಕಡಮೆ ಇದ್ದು ನಾಲ್ಕು ವರ್ಷಗಳಲ್ಲಿ ಅದು ಇನ್ನೂ ಕೆಳಮಟ್ಟಕ್ಕೆ ಇಳಿಯಿತು.

ಅಲ್ಲದೆ, ಅಲ್ಜೈಮರ್ ಕಾಯಿಲೆ ಮತ್ತು ರಕ್ತನಾಳಗಳ ಕ್ಷಮತೆಯ ನಾಶದಲ್ಲಿ ಇರಬಹುದಾದ ವಿಟಮಿನ್-ಡಿಯ ಕೊರತೆಯ ಪಾತ್ರದ ಬಗೆಗೆ ಸಂಶೋಧನೆಗಳು ತೀವ್ರಗೊಂಡಿವೆಯಾದರೂ, ಇನ್ನೂ ಅವು ಅಂತಿಮ ಘಟ್ಟವನ್ನು ತಲುಪಿಲ್ಲ. ಅವುಗಳನ್ನು ಮುಂದುವರಿಸಬೇಕಾದ ಆವಶ್ಯಕತೆ ಇದೆ.

**ಖಿನ್ನತೆ:**

ಖಿನ್ನತೆಯ ಮನಃಸ್ಥಿತಿಯು ವಯಸ್ಸಾದವರಲ್ಲಿ, ಅದರಲ್ಲಿಯೂ ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಇಂತಹ ಪರಿಸ್ಥಿತಿಯಲ್ಲಿರುವವರಲ್ಲಿ ಸುಮಾರು ಶೇಕಡ 20ರಷ್ಟು ರೋಗಿಗಳಿಗೆ ವಿಟಮಿನ್-ಡಿಯ ಕೊರತೆಯಿರುವುದನ್ನು ಮತ್ತು ಈ ಕೊರತೆಯು ಹೆಚ್ಚಾದಂತೆ ಮಾನಸಿಕ ದೌರ್ಬಲ್ಯವು ಕೂಡ ಹೆಚ್ಚಾಗುತ್ತಿರುವುದನ್ನು ಇಲ್ಲಿಯವರೆಗಿನ ಅಧ್ಯಯನಗಳು ಬಹಿರಂಗಪಡಿಸಿವೆ. ಆದರೂ ಇವುಗಳ ನಡುವಿನ ನಿಕರವಾದ ಸಂಬಂಧವನ್ನು ದೃಢಪಡಿಸಲು ಇನ್ನಷ್ಟು ಸಂಶೋಧನೆಗಳ ಅಗತ್ಯವಿದೆ.


**ದೈಹಿಕವಾಗಿ ವಯಸ್ಸಾಗುವುದು:**

ವೃದ್ಧಾಪ್ಯಕ್ಕೆ ಸಂಬಂಧಿಸಿದ ಹಲವು ರೋಗಗಳಿಗೆ ವಿಟಮಿನ್-ಡಿಯ ಕೊರತೆಯು ಕಾರಣವಾಗುತ್ತದೆ ಎಂಬುದು ಇಂದಿನ ತಿಳುವಳಿಕೆ. ಈ ವಿಟಮಿನ್‌ನ ಪೂರೈಕೆಯು ಇಂತಹ ರೋಗಗಳನ್ನು ತಡೆಯಬಲ್ಲುದೇ ಅಥವಾ ಗುಣಪಡಿಸಬಲ್ಲುದೇ ಎಂಬುದನ್ನು ಕುರಿತು ಸಂಶೋಧನೆಗಳು ಮುಂದುವರಿಯುತ್ತಿವೆ.

**ಮೂಳೆಗಳಲ್ಲಿ ರಂಧ್ರಗಳುಂಟಾಗುವುದು:**

ಮೂಳೆಗಳ ಸಾಂದ್ರತೆಯು ಕಡಮೆಯಾಗುವುದರಿಂದ ಅವುಗಳಲ್ಲಿ ರಂಧ್ರಗಳುಂಟಾಗುತ್ತವೆ. ಇದು ವಯಸ್ಸಾದವರು ಅದರಲ್ಲಿಯೂ ವೃದ್ಧ ಮಹಿಳೆಯರಲ್ಲಿ ಹೆಚ್ಚಾಗಿ ಮೂಳೆಮುರಿತಗಳಿಗೆ ಕಾರಣವಾಗುತ್ತದೆ. ಕ್ಯಾಲ್ಸಿಯಂನ ಕೊರತೆ, ವಿಟಮಿನ್-ಡಿಯ ಸೇವನೆಯಲ್ಲಿನ ಕೊರತೆ, ಧೂಮಪಾನ, ಋತುಬಂಧ, ವಂಶವಾಹಿಗಳು ಹಾಗು ದೇಹದ ತೂಕದಲ್ಲಿನ ಇಳಿತ - ಇವು ಅಪಾಯದ ಪರಿಸ್ಥಿತಿಗೆ ಕಾರಣಗಳಾಗಿರುತ್ತವೆ.

ಅಸ್ಥಿಗಳ ಆರೋಗ್ಯಕ್ಕೆ ವಿಟಮಿನ್ ಡಿ ಮತ್ತು ಕ್ಯಾಲ್ಸಿಯಂ ಎರಡೂ ಬಹಳ ಮುಖ್ಯವಾದವು. ವಿಟಮಿನ್ -ಡಿ ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿದ್ದರೆ, ಕರುಳಿಗೆ ಕ್ಯಾಲ್ಸಿಯಮ್ಮನ್ನು ಹೀರಿಕೊಳ್ಳುವ ಶಕ್ತಿ ಕುಗ್ಗಿ ಹೋಗುತ್ತದೆ.



ಇದರಿಂದ ಪ್ಯಾರಾಥೈರಾಯ್ಡಿನ ಮಟ್ಟವು ಹೆಚ್ಚಾಗಿ ಮೂಳೆಗಳ ಶಕ್ತಿಯು ಕಡಮೆಯಾಗಿ ಅಸ್ಥಿರಂಧ್ರಗಳು ಹೆಚ್ಚಾಗಿ ಮೂಳೆಗಳ ಸಾಂದ್ರತೆಯಲ್ಲಿ ಇಳಿತ ಕಂಡುಬರುತ್ತದೆ. ಅಂತಹವರಿಗೆ, ಅದರಲ್ಲಿಯೂ ವಯಸ್ಸಾದವರಿಗೆ ಕ್ಯಾಲ್ಸಿಯಂ ಮತ್ತು ವಿಟಮಿನ್ನುಗಳ ಪೂರಕಗಳನ್ನು ನೀಡಿದರೆ ಮೂಳೆಮುರಿತದ ಸಂಭವವನ್ನು ಗಮನಾರ್ಹವಾಗಿ ಕಡಮೆ ಮಾಡಬಹುದು ಎಂದು ಹಲವಾರು ವಿಶ್ಲೇಷಣಾತ್ಮಕ ಅಧ್ಯಯನಗಳು ಹೇಳುತ್ತವೆ. 68,000 ಮಂದಿ ವಯಸ್ಸಾದವರ ಮೇಲೆ ನಡೆಸಿದ ಅಧ್ಯಯನದಿಂದ ಕೇವಲ ವಿಟಮಿನ್- ಡಿ ಪೂರಕಗಳು ಈ ಸಮಸ್ಯೆಯನ್ನು ಕಡಮೆಗೊಳಿಸಲಾಗುವುದಿಲ್ಲವಾದುದರಿಂದ, ಇವೆರಡರ ಅಗತ್ಯವೂ ಇರುತ್ತದೆ ಎಂದು ತಿಳಿದುಬಂದಿದೆ.

ಮೂಳೆಗಳ ಅಸ್ಥಿರತೆಯ ಕಾರಣದಿಂದ ಬೀಳುವವರು ಮತ್ತು ಇತರರ ಮೇಲೆ ನಡೆಸಿದ ವಿವಿಧ ಅಧ್ಯಯನಗಳ ಪ್ರಕಾರ ಹಾಗೆ ಬೀಳುವವರ ರಕ್ತದಲ್ಲಿ ವಿಟಮಿನ್-ಡಿಯ ಅಂಶ ಕಡಮೆಯಿರುವುದು ಗೊತ್ತಾಗಿದೆ. ಇದರ ಪರಿಹಾರಕ್ಕೆ ವಿಟಮಿನ್ ಪೂರಕಗಳ ಸೇವನೆಯ ಜೊತೆಜೊತೆಗೆ, ವ್ಯಾಯಾಮದ ಅಗತ್ಯವೆಂದು ಪರಿಣತರು ಅಭಿಪ್ರಾಯಪಡುತ್ತಾರೆ.

**ಹೃದಯದ ರಕ್ತನಾಳಗಳ ರೋಗಗಳು:**

ಹೃದಯದ ರಕ್ತನಾಳದ ಸಮಸ್ಯೆಗಳು ಹೆಚ್ಚಿನ ಸಾವುಗಳಿಗೆ ಕಾರಣವಾಗುತ್ತವೆ. ವಿಟಮಿನ್-ಡಿಯ ಪಾತ್ರವು ಹೃದಯದ ಆರೋಗ್ಯಕ್ಕೆ ಅತ್ಯಂತ ಆವಶ್ಯಕ ಎಂಬುದಕ್ಕೆ ಹೆಚ್ಚು ಹೆಚ್ಚು ಪುರಾವೆಗಳು ಇವೆ. ಇದರ ಕೊರತೆಯು ವ್ಯಕ್ತಿಗಳಿಗೆ ಮಾರಕವಾಗುತ್ತವೆ.

**ಅಧಿಕ ರಕ್ತದೊತ್ತಡ:**

ವಯಸ್ಸು ಏರಿದಂತೆ ರಕ್ತದೊತ್ತಡದ ಪ್ರಕರಣಗಳ ಸಂಖ್ಯೆಯೂ ಹೆಚ್ಚಾಗುತ್ತಾ ಹೋಗುತ್ತದೆ. ರಕ್ತದೊತ್ತಡದ ಏರಿಕೆಗೆ ವಿಟಮಿನ್-ಡಿಯ ಕೊರತೆಯೂ ಕಾರಣವಾಗುತ್ತದೆ. ಆದರೆ, ಇಂತಹ ಪ್ರಕರಣಗಳನ್ನು ಕುರಿತ ಅಧ್ಯಯನಗಳ ಫಲಿತಾಂಶಗಳು ಏಕರೂಪದಲ್ಲಿ ಇಲ್ಲ.

**ಎರಡನೆಯ ಪ್ರಕಾರದ ಮಧುಮೇಹ:**

ಈ ಪ್ರಕಾರದ ಮಧುಮೇಹವು ಹೃದಯದ ರಕ್ತನಾಳಗಳ ಮತ್ತು ಪಾರ್ಶ್ವವಾಯುವಿನಂತಹ ಹಲವು ತೀವ್ರತರವಾದ ಸಮಸ್ಯೆಗಳಿಗೆ ದಾರಿಯನ್ನು ಮಾಡಿಕೊಡುತ್ತವೆ. ಕೆಲವು ಅಧ್ಯಯನಗಳು ರಕ್ತದಲ್ಲಿನ ಸಕ್ಕರೆಯ ಅಂಶಗಳನ್ನು ಕಡಮೆ ಮಾಡುವಲ್ಲಿ ವಿಟಮಿನ್-ಡಿಯ ಪೂರಕಗಳು ಸಹಕಾರಿಯೆಂದು ಹೇಳಿದರೂ ಈ ವಿಷಯದಲ್ಲಿ ಇನ್ನೂ ಹೆಚ್ಚು ಸಂಶೋಧನೆಗಳ ಅಗತ್ಯವಿದೆ.

**ರೋಗ ನಿರೋಧಕ ವ್ಯವಸ್ಥೆ:**

ವಯಸ್ಸಾದಂತೆ ರೋಗ ನಿರೋಧಕ ವ್ಯವಸ್ಥೆ ಕುಂಠಿತವಾಗಿ, ಸೋಂಕುಗಳಿಗೆ ಬಲಿಯಾಗುವ ಸಂಭವ ಏರುತ್ತದೆ. ಸೋಂಕುಗಳನ್ನು ತಡೆಗಟ್ಟಲು ವಿಟಮಿನ್-ಡಿ ಬಹಳಷ್ಟು ಸಹಾಯವನ್ನು ಮಾಡುತ್ತದೆ. ಈ ವಿಟಮಿನ್ನಿನ ಪೂರಕಗಳು ದೇಹದಲ್ಲಿನ ರೋಗ ನಿರೋಧಕ ವ್ಯವಸ್ಥೆಯನ್ನು ಬಲಪಡಿಸುತ್ತದೆಯಾದರೂ, ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಬೇಕಾಗಿದೆ.

**ಕ್ಯಾನ್ಸರ್:**

ವಿಟಮಿನ್-ಡಿಯ ಪ್ರಮಾಣ ದೇಹದಲ್ಲಿ ಹೆಚ್ಚಾಗಿದ್ದರೆ, ಅದು ಹಲವಾರು ಬಗೆಯ ಕ್ಯಾನ್ಸರ್‌ಗಳ ಅಪಾಯವನ್ನು ಕಡಮೆಗೊಳಿಸುತ್ತದೆ ಎಂದು ಕೆಲವು ಅಧ್ಯಯನಗಳು ಹೇಳುತ್ತವೆ. ಆದರೆ ಪ್ರಾಯೋಗಿಕ ಪರೀಕ್ಷೆಗಳ ನಿರ್ದಿಷ್ಟವಾದ ಫಲಿತಾಂಶಗಳು ದೊರೆತಿಲ್ಲ. ಆದುದರಿಂದ ಇದರ ಬಗೆಗೆಇನ್ನೂ ಹೆಚ್ಚು ಸಂಶೋಧನೆಗಳು ನಡೆಯಬೇಕಾಗಿವೆ.

**ಉಪಸಂಹಾರ:**

ವಿಟಮಿನ್-ಡಿಯ ಕೊರತೆಯಿಂದ ವಯಸ್ಸಾದವರಲ್ಲಿ ಹಲವಾರು 'ಗಂಭೀರ ಸಮಸ್ಯೆಗಳು ಉದ್ಭವವಾಗುತ್ತವೆ. ಅಸ್ಥಿರಂಧ್ರಗಳ ಮತ್ತು ನಿಶ್ಶಕ್ತಿಯಿಂದ ಕೆಳಕ್ಕೆ ಬೀಳುವ ಸಂಭವಗಳನ್ನು ವಿಟಮಿನ್-ಡಿಯ ಪೂರಣದಿಂದ ಕಡಮೆಗೊಳಿಸಬಹುದಾದರೂ, ಇತರ ಸಮಸ್ಯೆಗಳ ವಿಷಯದಲ್ಲಿ ವಿಟಮಿನ್-ಡಿಯ ಪಾತ್ರವನ್ನು ಕುರಿತು ಇನ್ನೂ ಹೆಚ್ಚಿನ ಅಧ್ಯಯನದ ಅಗತ್ಯವಿದೆ.

ಸೂರ್ಯನ ಬಿಸಿಲು ವಿಟಮಿನ್-ಡಿಯ ಉತ್ತಮ ಆಕರವಾಗಿದೆ. ಆದರೂ ವೃದ್ಧರಿಗೆ ಓಡಾಟವು ಅಷ್ಟು ಸುಲಭವಲ್ಲ. ಆದುದರಿಂದ ಅವರಿಗೆ ವಿಟಮಿನ್-ಡಿಯ ಪೂರಕಗಳು ಅತ್ಯಾವಶ್ಯಕ. ಔಷಧ ಸಂಶೋಧನಾ ಸಂಸ್ಥೆಯು70 ವರ್ಷ ಮೀರಿದವರಿಗೆ ದಿನಕ್ಕೆ 800 ಐಯುಗಳಷ್ಟು ಪೂರಕಗಳನ್ನೂ ಇತರರಿಗೆ 600 ಐಯು (ಅಂತಾರಾಷ್ಟ್ರೀಯಯೂನಿಟ್)ಗಳಷ್ಟು ಪೂರಕಗಳನ್ನೂ, ಶಿಫಾರಸ್ಸು ಮಾಡಿದೆ.

## ಡಾ. ಬಿ.ಆರ್.ಸ್ವಾಮಿ ಬೆಳೆದು ಬಂದ ದಾರಿ

ಡಾ. ಬಿ. ಆರ್. ಸ್ವಾಮಿ ಜನಿಸಿದ್ದು ದಾವಣಗೆರೆಯಲ್ಲಿ. ತಂದೆ ಬಿ. ಎ. ರೇವಪ್ಪ. ತಾಯಿ. ಪಾರ್ವತಮ್ಮ. ಒಂದನೇ ತರಗತಿಯಿಂದ ಮೆಡಿಕಲ್‌ನಲ್ಲಿ ಪಿ.ಜಿ ಶಿಕ್ಷಣದ ತನಕ ಬೆಂಗಳೂರಿನಲ್ಲೇ ವಿದ್ಯಾಭ್ಯಾಸ. 1978 ರಲ್ಲಿ ಬೆಂಗಳೂರಿನ ಮೆಡಿಕಲ್ ಕಾಲೇಜಿನಿಂದ ಪದವಿ ಪಡೆದ ನಂತರ ವೆಸ್ಟ್‌ಇಂಡೀಸ್, ಜಮೈಕಾ, ಟ್ರಿನಿಡಾಡ್, ಗಯಾನ, ಬೇಲಿಸ್ ಮುಂತಾದ ದೇಶಗಳಲ್ಲಿ ವೈದ್ಯರಾಗಿ ಸೇವೆಸಲ್ಲಿಸಿ, ಪ್ರಸ್ತುತ ಕೆನಡಾದ ಟೊರೆಂಟೋದಲ್ಲಿ ಎನ್.ಜಿ.ಒ.ಸಂಸ್ಥೆ ನಡೆಸುವ ಸೀನಿಯರ್ಸ್ ಕೇರ್ ಸ್ಪೆಷಾಲಿಟಿಸ್ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಪತ್ನಿ ಸ್ವೀಡನ್ ದೇಶದವರಾಗಿದ್ದರೂ ಕನ್ನಡ ಕಲಿತು ಮನೆಯ ಮಟ್ಟಿಗೆ ಕನ್ನಡದಲ್ಲೇ ಮಾತನಾಡುವುದು ಕನ್ನಡಿಗರಿಗೆಲ್ಲ ಖುಷಿ ತರುವ ಸಂಗತಿ. ಈ ದಂಪತಿಗೆ ಮೂವರು ಗಂಡು ಮಕ್ಕಳಿದ್ದಾರೆ.


## ಭಾರತದಲ್ಲೂ ಗಮನ ಸೆಳೆದ ವಿಟಮಿನ್-ಡಿ ಕೊರತೆ

'ವಿಟಮಿನ್‌ಡಿಯ ಕೊರತೆ ಇಂದು ವಿಶ್ವದಾದ್ಯಂತ ಕಾಡುತ್ತಿರುವ ಸಮಸ್ಯೆಯಾಗಿದೆ. ಇದನ್ನು ನಿರ್ಲಕ್ಷಿಸಿದರೆ, ಇದು ಅನೇಕ ಗಂಭೀರ ಪರಿಣಾಮಗಳಿಗೆ ದಾರಿಯನ್ನು ಮಾಡಿಕೊಡುತ್ತದೆ.' ವೆಲ್ಲೂರಿನ ನೂರವಿ ಆಸ್ಪತ್ರೆ ಹಾಗೂ 'ದ ಹಿಂದೂ' ಪತ್ರಿಕೆ ಜಂಟಿಯಾಗಿ 'ವಿಟಮಿನ್-ಡಿಯ ಕೊರತೆ: ಮಿಥ್ಯ ಹಾಗೂ ವಾಸ್ತವತೆ' ಎಂಬ ವಿಷಯದ ಮೇಲೆ ಏರ್ಪಡಿಸಿದ್ದ ಅಂತರ್ಜಾಲ ಕಾರ್ಯಾಗಾರದಲ್ಲಿ ಹಲವಾರು ತಜ್ಞರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ನೂರವಿ ಆಸ್ಪತ್ರೆಯ ಹಿರಿಯ ಸಲಹೆಗಾರರಾಗಿರುವ ಡಾ.ಕುರಿಯನ್‌ಥಾಮಸ್ ಅವರು ಹೀಗೆ ಅಭಿಪ್ರಾಯ ಪಡುತ್ತಾರೆ: "ದೇಶದಲ್ಲಿ ಶೇಕಡ 40 ರಿಂದ ಶೇಕಡ70ರಷ್ಟು ಜನರು ವಿಟಮಿನ್-ಡಿಯ ಕೊರತೆಯನ್ನು ಅನುಭವಿಸುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣವೆಂದರೆ, ಬಹಳಷ್ಟು ಜನರು ಮನೆಯ ಒಳಗೇ ಕಾಲ ಕಳೆಯುತ್ತಾರೆ, ಮನೆಯ ಮತ್ತು ವಾಹನಗಳ ಕಿಟಕಿಯಿಂದ ಒಳಕ್ಕೆ ಬಿಸಿಲು ಬಾರದ ಹಾಗೆ ಕಪ್ಪು ತೆರೆ/ ಗಾಜುಗಳನ್ನು ಹಾಕಿಸಿಕೊಂಡಿರುತ್ತಾರೆ ಮತ್ತು ಹಲವರು ಬಿಸಿಲು ಶರೀರಕ್ಕೆ ತಾಕದಂತೆ 'ಸನ್ ಸ್ಕ್ರೀನ್ ಲೋಷನ್'ಗಳನ್ನು ಹಚ್ಚಿಕೊಳ್ಳುತ್ತಾರೆ. ಸೂರ್ಯನಿಂದ ಉಚಿತವಾಗಿ ದೊರೆಯುವ ವಿಟಮಿನ್-ಡಿಯು ನಮ್ಮ ಪಚನಕ್ರಿಯೆಯ ಸಂದರ್ಭದಲ್ಲಿ ಕ್ಯಾಲ್ಸಿಯಮ್ಮನ್ನು ಹೀರಿಕೊಳ್ಳಲು ನೆರವಾಗುತ್ತದೆ. ವಿಟಮಿನ್-ಡಿಯ ಕೊರತೆಯು ಮಕ್ಕಳಲ್ಲಿ ರಿಕೆಟ್ಸ್ ಕಾಯಿಲೆಗೆ ಹಾಗೂ ವಯಸ್ಕರಲ್ಲಿ ಮೂಳೆಯ ದೌರ್ಬಲ್ಯಕ್ಕೂ ಕಾರಣವಾಗುತ್ತದೆ. ಇದನ್ನು ತಪ್ಪಿಸಲು ಸುಲಭವಾದ ಕ್ರಮವೆಂದರೆ, ಮಧ್ಯಾಹ್ನದ ಬಿಸಿಲಿಗೆ ಮೈಯನ್ನು ಒಡ್ಡುವುದು ಹಾಗೂ ಈ ವಿಟಮಿನ್ನಿನ ಕೊರತೆಯಿರುವವರು ವಿಟಮಿನ್-ಡಿಯ ಪೂರಕಗಳನ್ನು ಸೇವಿಸುವುದು".

**ಕೃಪೆ: 'ದ ಹಿಂದೂ'-**

**ನೆನಪಿನಲ್ಲಿಡಬೇಕಾದ ಮಾತು**



> ವಿಶ್ವದಲ್ಲಿ ಬೇರೆ ಬೇರೆ ಧರ್ಮಗಳೆಲ್ಲ ಇರಲಿ: ಎಲ್ಲ ಧರ್ಮಗಳು ವರ್ಧಿಸಲಿ:
> ಭಗವಂತನ ಮಹಿಮೆಯನ್ನು ಎಲ್ಲ ಭಾಷೆಗಳಲ್ಲೂ, ವಿವಿಧ ರಾಗಗಳಲ್ಲಿ ಹಾಡಲಿ:
> ಧರ್ಮ ಧರ್ಮಗಳ ವ್ಯತ್ಯಾಸ, ವೈಶಿಷ್ಟ್ಯಗಳನ್ನು ಗೌರವಿಸಿ, ಭಾವೈಕ್ಯತೆಯ ಬೆಳಕನ್ನು ನಂದಿಸದಿರಿ.
> ಎಲ್ಲಾ ಧರ್ಮಗಳು ಸತ್ವಯುತವೆಂದು ಮನ್ನಿಸಿ.
>
> – ಭಗವಾನ್ ಶ್ರೀಸತ್ಯಸಾಯಿ ಬಾಬಾ, ಪುಟ್ಟಪರ್ತಿ
>
> (ಡಾ ಮೋಹನ ವೀ. ಅವರ ಗ್ರಂಥ Sathya Sai Baba Lives on ಗ್ರಂಥದಿಂದ ಆಯ್ದ ಭಾಗ)

# ಫಿಜಿಯೋಥೆರಪಿ ಕೋರ್ಸ್ ಮುಗಿಸಿದ ವಿದ್ಯಾರ್ಥಿಗಳಿಗೆ ಶುಕ್ರದೆಶೆ!!

"ಈ ವರ್ಷ ಫಿಜಿಯೋಥೆರಪಿ ಕೋರ್ಸ್ ಮುಗಿಸಿ ಹೊರಬಂದ ವಿದ್ಯಾರ್ಥಿಗಳಿಗೆ ಶುಕ್ರದೆಶೆ. ನಿಜಕ್ಕೂ ಅದೃಷ್ಟವಂತರು ಎನ್ನಬಹುದು". ಈ ಮಾತು ಹೇಳಿದ್ದು, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯೆ ಪ್ರೊ. ವೈಶಾಲಿ ಶ್ರೀಜಿತ್. ಕಾರಣವಿಷ್ಟೆ ಬಹಳ ವರ್ಷಗಳ ಬೇಡಿಕೆಯಾಗಿದ್ದ ರಾಜ್ಯ ಅಲೈಡ್ ಸೈನ್ಸ್ ಕೌನ್ಸಿಲ್ ಸ್ಥಾಪನೆಯಾಗಿದ್ದು ಇದರಿಂದಾಗಿ ವಿದ್ಯಾರ್ಥಿಗಳು ಕಾಲೇಜು ಮುಗಿಸಿ ಹೊರಗೆ ಬರುತ್ತಿದ್ದಂತೆಯೇ ನೋಂದಣಿ ಮಾಡಿಕೊಂಡು ವೃತ್ತಿಜೀವನಕ್ಕೆ ಕಾಲಿಡಬಹುದು. ತುಮಕೂರಿನ ಶ್ರೀದೇವಿ ಫಿಜಿಯೋಥೆರಪಿ ಕಾಲೇಜು ಏರ್ಪಡಿಸಿದ್ದ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಪ್ರೊ. ವೈಶಾಲಿ ಶ್ರೀಜಿತ್ ಈ ವಿಷಯ ತಿಳಿಸಿದರು. ಇದರಿಂದ ವೃತ್ತಿಯಲ್ಲಿ ಭವಿಷ್ಯ ರೂಪಿಸಿಕೊಳ್ಳಲು ಈ ಕೋರ್ಸ್ ವರದಾನವಾಗಿದೆ. ಹುಟ್ಟಿನಿಂದ ಕೊನೆ ಉಸಿರಿನವರೆಗೂ ಫಿಜಿಯೋಥೆರಪಿ ಅಗತ್ಯವಿದೆ ಎನ್ನುವುದು ಮನವರಿಕೆಯಾದರೆ ಈ ಕೋರ್ಸ್‌ನ ಮಹತ್ವ ತಿಳಿಯುತ್ತದೆ.

**ಜ್ಞಾನ ಸಂಪಾದನೆಯೇ ಮುಖ್ಯ ಗುರಿ:**

"ಜ್ಞಾನ ಸಂಪಾದನೆಯೇ ವಿದ್ಯಾರ್ಥಿಗಳ ಮುಖ್ಯ ಗುರಿಯಾಗಬೇಕು. ಪದವಿ ಪಡೆದ ಮಾತ್ರಕ್ಕೆ ಎಲ್ಲವೂ ಮುಗಿದು ಹೋಗಲಿದೆ ಎಂಬ ತಾತ್ಸಾರ ಬೇಡ. ವೈದ್ಯಕೀಯಕ್ಷೇತ್ರ




ಕಲ್ಪನೆಗೂ ಮೀರಿ ಬೆಳೆಯುತ್ತಿದೆ. ಪ್ರತಿ ದಿನವೂ ಹೊಸತನ್ನು ಕಲಿಯುತ್ತಾ ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು. ಕಳೆದ ನಲವತ್ತು ವರ್ಷಗಳಲ್ಲಿ ಫಿಜಿಯೋಥೆರಪಿ ಕ್ಷೇತ್ರ ಅಗಾಧವಾಗಿ ಬೆಳೆದಿದೆ. ಅದೇ ರೀತಿ ಅವಕಾಶಗಳು ಜಾಗತಿಕ ಮಟ್ಟದಲ್ಲಿ ಹೆಚ್ಚಾಗಿದೆ" ಎಂದು ಮೈಸೂರು ಜೆ.ಎಸ್.ಎಸ್ ಫಿಜಿಯೋಥೆರಪಿ ಕಾಲೇಜು ಪ್ರಾಂಶುಪಾಲರಾದ ಡಾ. ಕವಿತಾರಾಜ ಪ್ರತಿಪಾದನೆ ಮಾಡಿದರು.ಎಂದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ. ಆರ್. ಹುಲಿನಾಯ್ಕರ್ ಮಾತನಾಡಿ, "ಕಳೆದ 25 ವರ್ಷಗಳಿಂದ ನಮ್ಮ ಕಾಲೇಜಿನಿಂದ ಹೊರಬಂದ ಫಿಜಿಯೋಥೆರಪಿ ವಿದ್ಯಾರ್ಥಿಗಳು ವಿದೇಶಗಳಲ್ಲಿ ಹಾಗೂ ದೇಶದ ನಾನಾ ರಾಜ್ಯಗಳಲ್ಲಿ ಕೆಲಸ ಮಾಡುತ್ತಿದ್ದು, ಇದರಿಂದ ಸಂಸ್ಥೆಯ ಘನತೆ–ಗೌರವ ಹೆಚ್ಚಾಗಿದೆ. ಫಿಜಿಯೋಥೆರಪಿ ಕೋರ್ಸ್ ಎಷ್ಟು ಮುಖ್ಯ ಎಂಬುದು ಭಾರತಕ್ಕೆ ಮಾತ್ರವಲ್ಲ, ವಿಶ್ವಕ್ಕೆ ಮನವರಿಕೆಯಾಗಿದೆ. ವೈದ್ಯರಿಗಿಂತಲೂ ನಿಮ್ಮ ಮೇಲೆ ಹೆಚ್ಚು ಜವಬ್ದಾರಿ ಇದೆ. ಹೆಚ್ಚು ಸಂಪಾದನೆ ಮಾಡುವ ಅವಕಾಶವಿದೆ. ನಮ್ಮ ಕಾಲೇಜಿನ ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ಏರ್ಪಡಿಸುವ ಕ್ರೀಡಾಕೂಟದಲ್ಲಿ ಭಾಗಿಯಾಗಿ ಪದಕ ತರುತ್ತಿರುವುದು ಸಂಸ್ಥೆಗೆ ಗೌರವ ಮತ್ತು ಹೆಮ್ಮೆ ವಿಷಯವಾಗಿದೆ" ಎಂದರು.

ಮೆಡಿಕಲ್ ಕಾಲೇಜಿನ ನಿರ್ದೇಶಕರಾದ ಡಾ.ರಮಣ್ ಹುಲಿನಾಯ್ಕರ್ ಅವರು "ವಿದ್ಯಾರ್ಥಿ ಜೀವನ ಮುಗಿಯಿತು ಎಂದು ಮೈಮರೆಯುವಂತಿಲ್ಲ. ನಾಳೆಯಿಂದ ವೃತ್ತಿಜೀವನದ ಹೊಸ ಅಧ್ಯಾಯ ಆರಂಭವಾಗುತ್ತದೆ. ನಿಮಗೆ ಬೇಕಾದಷ್ಟು ಅವಕಾಶಗಳಿದ್ದು ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಆರಂಭದಲ್ಲಿ ಈ ಕೋರ್ಸ್‌ಗಳಿಗೆ ಭವಿಷ್ಯವಿಲ್ಲ ಎನ್ನುವ ಮನೋಭಾವ ಇತ್ತು. ದಕ್ಷಿಣ ಭಾರತದಲ್ಲಿ ಆಗ ಕೇವಲ ಮೂರು ಕಾಲೇಜುಗಳಿದ್ದವು. ಆದರೆ ಇಂದು ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ವೈದ್ಯರಿಗಿಂತಲೂ ಫಿಜಿಯೋಥೆರಪಿಸ್ಟ್‌ಗಳು ಹೆಚ್ಚು ಸಂಪಾದನೆ ಮಾಡುವ ಅವಕಾಶವಿದೆ" ಎಂದರು.

ಐಟಿ ವಿಭಾಗದ ಎಂ. ಎಸ್. ಪಾಟೀಲ್ ಅವರು "ಕೋವಿಡ್ ಸಂದರ್ಭದಲ್ಲಿ ಫಿಜಿಯೋಥೆರಪಿಗಳು ನಿರ್ವಹಿಸಿದ ಪಾತ್ರವನ್ನು ಮರೆಯಲಾಗದು. ಇದೊಂದು ಪವಿತ್ರ ಹುದ್ದೆ. ಅದನ್ನು ಗಮನದಲ್ಲಿಟ್ಟುಕೊಂಡು ನಾಳೆಯಿಂದ ಹೊಸ ಬದುಕು ಆರಂಭಿಸಬೇಕು" ಎಂದರು. ಈ ಸಂದರ್ಭದಲ್ಲಿ ಮೂವತ್ತೆಂಟು ಪದವಿ ಮತ್ತು ಇಬ್ಬರು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

▪ ವರದಿ: ಎನ್. ಆನಂದ




## ಪರಿಸರ ದಿನಾಚರಣೆ

"ಪರಿಸರ ದಿನಾಚರಣೆ ಕೇವಲ ಒಂದು ದಿನದ ವೇದಿಕೆಯ ಭಾಷಣ ಕಾರ್ಯಕ್ರಮಗಳಿಗೆ ಮೀಸಲಾಗಬಾರದು. ಪ್ರಕೃತಿಯೊಂದಿಗೆ ಭಾವನಾತ್ಮಕ ಸಂಬಂಧ ಹೊಂದುವ ರೀತಿಯಲ್ಲಿ ಅದನ್ನು ವರ್ಷವಿಡಿ ಆಚರಿಸಿದರೆ ಅದಕ್ಕೆ ಮಹತ್ವ ಬರುತ್ತದೆ. ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜು ಅಂಗಳದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 'ಲಕ್ಷವೃಕ್ಷ" ಕಾರ್ಯಕ್ರಮದಲ್ಲಿ ಗಿಡ ನೆಟ್ಟು ರಾಜ್ಯ ಬಿಜೆಪಿ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್ ಈ ಮಾತು ಹೇಳಿದರು. ಪರಿಸರದ ರಕ್ಷಣೆಯಲ್ಲಿ ಯುವಕ– ಯುವತಿಯರ ಪಾತ್ರ ನಿರ್ಣಾಯಕವಾಗಿದೆ.

"ಪ್ರತಿ ವರ್ಷ ಜೂನ್ 5ರಂದು ವಿಶ್ವ ಪರಿಸರ ದಿನಾಚರಣೆ ಆಚರಿಸಲಾಗುತ್ತಿದೆ. ಪರಿಸರದ ಕಾರ್ಯಕ್ರಮ ಒಂದು ದಿನಕ್ಕೆ ಸೀಮಿತಗೊಳಿಸದೇ ನಿರಂತರವಾಗಿ ಆಚರಿಸಬೇಕು. ಪರಿಸರ ರಕ್ಷಣೆ ಭಾವನಾತ್ಮಕ ವಿಚಾರವಾಗಿ ಮನಸ್ಸಿಗೆ ನಾಟಿದರೆ ತಂದೆ ತಾಯಿಗಳನ್ನು ಪ್ರೀತಿಸುವಷ್ಟು ಮಮತೆ ಪ್ರೀತಿ ಪ್ರಕೃತಿಯ ಮೇಲು ಮೂಡುತ್ತದೆ. ಪರಿಸರ ಸಂರಕ್ಷಣೆಗೆ ಭಾವನಾತ್ಮಕ ಮತ್ತು ಅಧ್ಯಾತ್ಮದ ಸ್ಪರ್ಶ ನೀಡಿದರೆ ಅದು ಸದಾಕಾಲ ಚಿರಂತನವಾಗಿರುತ್ತದೆ ಎನ್ನುವುದು ಪ್ರಧಾನಮಂತ್ರಿ ನರೇಂದ್ರಮೋದಿ ಅವರ ಸಂದೇಶವಾಗಿದೆ. ಅದನ್ನು ಅನುಷ್ಠಾನ ಮಾಡುವುದು ನಮ್ಮ ಜವಾಬ್ದಾರಿ" ಎಂದು ಬೀದರ್ ಶಾಸಕರಾದ ಶೈಲೇಂದ್ರ ಬೆಲ್ದಾಳೆ ಅವರು ಅಭಿಪ್ರಾಯಪಟ್ಟರು. ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ. ಆರ್. ಹುಲಿನಾಯ್ಕರ್, ಎಂ.ಎಸ್.ಪಾಟೀಲ್, ಡಾ.ರಮಣ್ ಹುಲಿನಾಯ್ಕರ್, ಶ್ರೀಮತಿ ಅಂಬಿಕಾ ಹುಲಿನಾಯ್ಕರ್ ಮತ್ತು ಡಾ. ಲಾವಣ್ಯ ರಮಣ ಅವರುಗಳು ಭಾಗಿಯಾಗಿದ್ದರು.

## ಕರ್ನಾಟಕ ರಾಜ್ಯ ನರ್ಸಿಂಗ್ ಡಿಪ್ಲೊಮಾ ಶಿಕ್ಷಣ ಮಂಡಲಿಯ ಪರೀಕ್ಷೆ

## ಕು. ದಿಶಾ ದಾಸ್‌ಗೆ ಐದನೆಯ ರ್‍ಯಾಂಕ್

ಶ್ರೀದೇವಿ ಮೆಡಿಕಲ್ ಮತ್ತು ಸಂಶೋಧನ ಸಂಸ್ಥೆಗೆ ಜೂನ್ 16, 2025 ಒಂದು ಸಂಭ್ರಮದ ದಿನವಾಗಿತ್ತು. ಕಾರಣ, ಅಂದು ಶ್ರೀದೇವಿ ಸಮೂಹ ಸಂಸ್ಥೆಯ ಭಾಗವಾಗಿರುವ ಶ್ರೀದೇವಿ ನರ್ಸಿಂಗ್ ಶಾಲೆಯ ವಿದ್ಯಾರ್ಥಿನಿಯಾಗಿದ್ದ ಕು. ದಿಶಾ ದಾಸ್ ಅವರು ಕರ್ನಾಟಕ ರಾಜ್ಯ ನರ್ಸಿಂಗ್ ಶಿಕ್ಷಣ ಮಂಡಲಿಯ ಪರೀಕ್ಷೆಯಲ್ಲಿ ತಮ್ಮ ಅರ್ಹತೆಯ ಆಧಾರದ ಮೇಲೆ ಐದನೆಯ ರ್‍ಯಾಂಕ್ ಪಡೆದಿದ್ದರಿಂದ ಅವರಿಗೆ ಗೌರವಪೂರ್ವಕವಾಗಿ ಸರ್ಟಿಫಿಕೇಟಿನ ಸಂಗಡ ಒಂದು ಕೈಗಡಿಯಾರವನ್ನು ಸದರಿ ಶಿಕ್ಷಣ ಮಂಡಲಿಯು ಪ್ರದಾನ ಮಾಡಿತು. ಇದರಿಂದ ಅತೀವ ಆನಂದದಿಂದ ಕೂಡಿದ್ದ ದಿಶಾ ಅವರು ತಮ್ಮ ಈ ಸಾಧನೆಗೆ ಮಾರ್ಗದರ್ಶನ, ಪ್ರೋತ್ಸಾಹ ಮತ್ತು ಬೆಂಬಲವನ್ನು ನೀಡಿದುದಕ್ಕಾಗಿ ಶ್ರೀದೇವಿ ನರ್ಸಿಂಗ್ ಸ್ಕೂಲಿನ ಪ್ರಾಂಶುಪಾಲರಾದ ಪ್ರೊ. ಆರ್. ಕೆ. ಮುನಿಸ್ವಾಮಿ, ಬೋಧಕವರ್ಗ ಮತ್ತು ಶ್ರೀದೇವಿ ಸಮೂಹ ಸಂಸ್ಥೆಯ ಆಡಳಿತ ಮಂಡಲಿಗೆ ತಮ್ಮ ಕೃತಜ್ಞತೆಗಳನ್ನು ಅರ್ಪಿಸಿದರು.



2021ರಲ್ಲಿ ಶ್ರೀದೇವಿ ನರ್ಸಿಂಗ್ ಸ್ಕೂಲಿಗೆ ಸೇರಿದ ಕು. ದಿಶಾ ದಾಸ್ ಅವರು ತಮ್ಮ ಅಧ್ಯಯನದ ಅವಧಿಯಲ್ಲಿ ಪ್ರತಿವರ್ಷವೂ ಅತ್ಯುತ್ತಮ ದರ್ಜೆಯಲ್ಲಿ ತೇರ್ಗಡೆಯಾಗುತ್ತಿದ್ದರು. ಇವೆಲ್ಲವಕ್ಕೂ ಕಿರೀಟವನ್ನಿಡುವಂತೆ ಅವರು ಅಂತಿಮ ವರ್ಷದಲ್ಲಿ ನರ್ಸಿಂಗ್ ಶಿಕ್ಷಣ ಮಂಡಲಿಯು ನಡೆಸಿದ ರಾಜ್ಯ ಮಟ್ಟದ ಪರೀಕ್ಷೆಯಲ್ಲಿ ಐದನೆಯ ರ್‍ಯಾಂಕನ್ನು ಪಡೆದು ಶ್ರೀದೇವಿ ಸಮೂಹ ಸಂಸ್ಥೆಗಳಿಗೆ ಹೆಮ್ಮೆಯನ್ನುಂಟು ಮಾಡಿದ್ದಾರೆ. ಅವರು ತಮ್ಮ ಅಧ್ಯಯನದಲ್ಲಿ ಯಾವಾಗಲೂ ಶ್ರದ್ಧೆಯಿಂದ ತೊಡಗಿಕೊಳ್ಳುತ್ತಿದ್ದ ವಿದ್ಯಾರ್ಥಿನಿಯಾಗಿದ್ದರು. ಅಲ್ಲದೆ, ಪಾಠ್ಯೇತರ ಕಾರ್ಯಕ್ರಮಗಳಲ್ಲಿಯೂ ಸಕ್ರಿಯವಾಗಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು.

ತುಮಕೂರಿನಲ್ಲಿರುವ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳು ವಿವಿಧ ಜ್ಞಾನಶಾಖೆಯಲ್ಲಿ ಉತ್ತಮ ಸೇವೆಯನ್ನು ಸಲ್ಲಿಸುತ್ತಾ, ರಾಜ್ಯದ ಅಗ್ರಗಣ್ಯ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿದೆ. ಈ ಸಂಸ್ಥೆಯು ಇಲ್ಲಿ ನರ್ಸಿಂಗ್, ವೈದ್ಯಕೀಯ ಮತ್ತು ಇಂಜನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಿ ಯಶಸ್ವಿಯಾಗಿ ಮುನ್ನಡೆಸಿಕೊಂಡು ಬರುತ್ತಿದೆ. ಇದಲ್ಲದೆ ಇಲ್ಲಿ ಈ ವಿಷಯಗಳಲ್ಲಿ ಸ್ನಾತಕೋತ್ತರ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಪಿಎಚ್.ಡಿ. ಅಧ್ಯಯನ ಮಾಡಲೂ ಅವಕಾಶಗಳನ್ನು ಒದಗಿಸುತ್ತಿದೆ. ಈ ಕ್ಯಾಂಪಸಿನಲ್ಲಿರುವ ಅತ್ಯುತ್ತಮ ಶೈಕ್ಷಣಿಕ ವಾತಾವರಣವು ದೇಶದ ವಿವಿಧ ಭಾಗಗಳಿಂದ ಹಾಗೂ ವಿದೇಶಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ.

ಶ್ರೀದೇವಿ ಶಿಕ್ಷಣ ಸಂಸ್ಥೆಗಳು ಅವುಗಳ ಸ್ಥಾಪಕ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್, ಮೆಡಿಕಲ್ ಕಾಲೇಜಿನ ನಿರ್ದೇಶಕರಾದ ಡಾ. ರಮಣ ಹುಲಿನಾಯ್ಕರ್ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ನಿರ್ದೇಶಕರಾದ ಎಂ.ಎಸ್. ಪಾಟೀಲ್ ಅವರ ನಾಯಕತ್ವದಲ್ಲಿ ಯಶಸ್ಸಿನ ಹಾದಿಯಲ್ಲಿ ವೇಗವಾಗಿ ಮುನ್ನಡೆಯುತ್ತಿವೆ.

# ಹಾಲುಮತದ ಯುವಜನಾಂಗದ ಉದ್ಯಮಶೀಲತೆಗೆ ಪ್ರೇರಣೆ

ಬೆಂಗಳೂರಿನ ಚಂದ್ರ ಲೇಔಟ್‌ನ ಸಮೀಪದ ಅತ್ತಿಕುಪ್ಪೆಯಲ್ಲಿ ದಿನಾಂಕ 8.6.2025ರಂದು ಐಎಎಸ್ ಕೋಚಿಂಗ್ ಸೆಂಟರ್‌ನಲ್ಲಿ ಹಾಲುಮತ ಸಮುದಾಯದ ಯುವಜನಾಂಗಕ್ಕೆ ಉದ್ಯಮಶೀಲತೆ ಕುರಿತಾದ ಒಂದು ದಿನದ ವಿಚಾರ ಸಂಕಿರಣ ಜರಗಿತು. ರಾಮೋಹಳ್ಳಿಯ ರಾಮಕೃಷ್ಣಯೋಗಾಶ್ರಮದ ಶ್ರೀಯೋಗಾನಂದ ಸ್ವಾಮೀಜಿಯವರು ಇದರ ಸಾನಿಧ್ಯವಿತ್ತು.




**ಸಮಾವೇಶದ ಧ್ಯೇಯ**

ಹಾಲುಮತ ಸಮಾಜದಲ್ಲಿ ಉದ್ಯಮಶೀಲತೆಯನ್ನು ಬೆಳೆಸುವುದು. ಅಲ್ಲಿನ ಯುವಜನಾಂಗಕ್ಕೆ ಉದ್ಯಮಶೀಲರಾಗಲು ಪ್ರೇರಣೆ ನೀಡುವುದು, ಅವರಿಗೆ ಉದ್ಯಮ ಸ್ಥಾಪಿಸಲು ಮಾರ್ಗದರ್ಶನ ಮತ್ತು ಸಹಾಯ ಮಾಡುವುದು ಹಾಗೂ ಹಾಲುಮತ ಸಮಾಜದಲ್ಲಿರುವ ಸಂಪನ್ಮೂಲವನ್ನು ಬಳಸಿಕೊಂಡು ಆ ಸಮಾಜವನ್ನು ಉದ್ಯಮಶೀಲತೆಯ ಕಡೆಗೆ ಕೊಂಡ್ಯೊಯುವುದು ಈ ಸಮಾವೇಶದ ಮುಖ್ಯ ಉದ್ದೇಶವಾಗಿತ್ತು.

ಈ ಸಮಾವೇಶದಲ್ಲಿ ಮುಖ್ಯ ಭಾಷಣಕಾರರಾಗಿ ಡಾ. ಎಂ.ಆರ್. ಹುಲಿನಾಯ್ಕರ್ ಅವರು ಭಾಗವಹಿಸಿ, ತಮ್ಮ ಅನಿಸಿಕೆಗಳನ್ನು ಶ್ರೋತೃವರ್ಗದವರೊಡನೆ ಹಂಚಿಕೊಂಡರು. ಅವರ ಭಾಷಣದ ಮುಖ್ಯಾಂಶಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

"ತಮ್ಮ ಸಮುದಾಯದಲ್ಲಿ ಆಸಕ್ತಿಯುಳ್ಳ ನಿಜವಾದ ಪ್ರಜ್ಞಾವಂತ ಜನರು ಮಾಡುವ ಕೆಲಸವನ್ನು ಇಂದಿನ ಸಂಘಟಕರು ಮಾಡಿದ್ದಾರೆ. ಸಮುದಾಯದ ಪ್ರಗತಿ ಉದ್ಯಮಶೀಲತೆಯಲ್ಲಿ ಅಡಕವಾಗಿದೆ ಎಂದು ಈ ಸಮಾರಂಭದ ಆಯೋಜಕರು ಭಾವಿಸಿರುವುದು ಶೇಕಡ ನೂರರಷ್ಟು ಸತ್ಯವಿದೆ.

**ಹೊಸ ಆರ್ಥಿಕನೀತಿಯ ಪ್ರಯೋಜನ ಯಾರಿಗೆ?**

ಈಗ ಉದ್ಯೋಗದಾತರಿಗೆ ಬೆಲೆಯೇ ಹೊರತು ಉದ್ಯೋಗಿಗಳಿಗೆ ಅಲ್ಲ. ಅಮೆರಿಕದಂತಹ ರಾಷ್ಟ್ರದಲ್ಲಿ ಐದು ದಶಲಕ್ಷ ಡಾಲರ್‌ನ ಉದ್ಯಮ ಸ್ಥಾಪಿಸುವವರಿಗೆ ಗ್ರೀನ್‌ಕಾರ್ಡ್ ಬೇಗ ಕೊಡುವ ಯೋಜನೆಯಿದೆ. ವಿಶ್ವದ ಎಲ್ಲಾ ರಾಷ್ಟ್ರಗಳೂ ಉದ್ಯಮಿಗಳನ್ನು ತಮ್ಮಲ್ಲಿಗೆ ಬನ್ನಿ ಎಂದು ಕರೆಯುವ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿವೆ. ಭಾರತದಲ್ಲೂ 'ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನ' ನಡೆಯುವುದನ್ನು ಎಲ್ಲರೂ ಗಮನಿಸಿದ್ದೀರಿ. ಇದಕ್ಕೆ ಕಾರಣ ಏನು?

ಇಂದು ಸರ್ಕಾರಿ ಕ್ಷೇತ್ರದಲ್ಲಿ ಉದ್ಯೋಗಕ್ಕೆ ಅವಕಾಶವೇ ಇಲ್ಲ. 1992ರಲ್ಲಿ ಹೊಸ ಆರ್ಥಿಕ ನೀತಿ ಮತ್ತು ವಿಶ್ವ ವ್ಯಾಪಾರೀಕರಣ ಮತ್ತು ಜಾಗತೀಕರಣದ ನೀತಿಯನ್ನು ಭಾರತ ಒಪ್ಪಿಕೊಂಡ ಮೇಲೆ ಉದ್ಯೋಗ ಸೃಷ್ಟಿ ಸೊನ್ನೆಗೆ ಬಂದಿದೆ.

ಶಿಕ್ಷಣ, ಆರೋಗ್ಯ ಮತ್ತು ಉತ್ಪಾದನೆ ಖಾಸಗಿಯವರ ಹಿಡಿತದಲ್ಲಿದೆ. ಮುಂದಿನ ದಿನಗಳಲ್ಲಿ ಮೀಸಲಾತಿಯೇ ಅಪ್ರಸ್ತುತವಾಗಬಹುದು. ಶಿಕ್ಷಣಕ್ಷೇತ್ರ ಹೆಚ್ಚು ಕಡಿಮೆ ಸರ್ಕಾರದ ಕೈತಪ್ಪಿದೆ. ಇದರ ಬಗ್ಗೆ ನಾನು ಒಳ್ಳೆಯದು, ಕೆಟ್ಟದ್ದು ಎಂಬ ತೀರ್ಮಾನ ಹೇಳುವುದಿಲ್ಲ. ವಸ್ತುಸ್ಥಿತಿಯನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಕೆಲವು ಸಮುದಾಯದವರು ಇಂತಹ ಪರಿಸ್ಥಿತಿ ಬರಬಹುದು ಎಂದು ಮೊದಲೇ ಸಮರ್ಥವಾಗಿ ಊಹಿಸಿದ್ದರು. ಅವರು ತಾವು ಗಳಿಸಿದ ಲಾಭವನ್ನು ತಮ್ಮ ಸಮುದಾಯಕ್ಕೆ ಕೊಟ್ಟಿದ್ದಾರೆ. ಉದಾಹರಣೆಗೆ, 1980ರಲ್ಲಿ ಆರ್. ಗುಂಡೂರಾವ್ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಇನ್‌ಫೋಸಿಸ್‌ನ ನಾರಾಯಣಮೂರ್ತಿ ಅವರು ಕೇವಲ ಹತ್ತು ಸಾವಿರ ಬಂಡವಾಳದೊಡನೆ ಕರ್ನಾಟಕಕ್ಕೆ ಬಂದರು. ತಮಗೆ ಭೂಮಿ ಮತ್ತು ಬಂಡವಾಳವನ್ನು ಕೊಟ್ಟರೆ ತಾವು ಉದ್ಯಮ ಸ್ಥಾಪಿಸುವುದಾಗಿ ಸರ್ಕಾರಕ್ಕೆ ಹೇಳಿದರು. ಅಂದಿನ ಹಣಕಾಸು ಸಚಿವರಾದ ವೀರಪ್ಪ ಮೊಯಿಲಿ ಮತ್ತು ಮುಖ್ಯಮಂತ್ರಿ ಗುಂಡೂರಾವ್ ಅವರಿಗೆ ಪ್ರೋತ್ಸಾಹ ಕೊಟ್ಟರು. ಇಂದು ಇನ್‌ಫೋಸಿಸ್ ದೊಡ್ಡ ಸಾಮ್ರಾಜ್ಯವನ್ನೇ ಕಟ್ಟಿದ್ದಾರೆ. ಅವರು ಸರ್ಕಾರದ ಪೂರ್ಣ ಸಹಕಾರ ಪಡೆದಿದ್ದಾರೆ, ಹೀಗೆ ಮೇಲ್ವರ್ಗದ ಉದ್ಯಮಶೀಲತೆ ಕುರಿತು ಅನೇಕ ಯಶೋಗಾಥೆಗಳನ್ನು ಹೇಳುತ್ತಾ ಹೋಗಬಹುದು. ಇಂದು ಸಿಂಡಿಕೇಟ್ ಬ್ಯಾಂಕ್ ಇಲ್ಲ. ಅದು ಬೇರೆಯ ಬ್ಯಾಂಕಿನೊಡನೆ ವಿಲೀನವಾಗಿದೆ. ಅದನ್ನು ಸ್ಥಾಪಿಸಿದವರು ಮಣಿಪಾಲ್ ಗ್ರೂಪ್‌ನ ಟಿ.ಎಂ.ಎ.ಪೈ. ಅವರು. ಇದರಿಂದ ಅವರಿಗೆ ಏನೆಲ್ಲಾ ಅನುಕೂಲಗಳಾಗಿವೆ ಎನ್ನುವುದಕ್ಕೆ ದೊಡ್ಡ ಗ್ರಂಥ ಬರೆಯಬಹುದು. ಭಾರತದ ಮೊದಲ ಖಾಸಗಿ ವೈದ್ಯಕೀಯ ಕಾಲೇಜು 'ಕಸ್ತೂರ್ ಬಾ ಮೆಡಿಕಲ್ ಕಾಲೇಜು' 1952–53 ರಲ್ಲಿ ಸ್ಥಾಪಿಸಿದ ಬ್ಯಾಂಕ್‌ನಿಂದಾಗಿ ಅವರಲ್ಲಿ ಬಂಡವಾಳಕ್ಕೆ ಕೊರತೆ ಇರಲಿಲ್ಲ. ಇಂದು ಮಣಿಪಾಲ್ ಗ್ರೂಪ್‌ನವರು ಆಸ್ಪತ್ರೆ, ಮುದ್ರಣ, ಹೋಟೆಲ್, ಮಾಧ್ಯಮ, ಮಾಲ್ ಮೊದಲಾದ ಅನೇಕ ಉದ್ಯಮ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅದೇ ರೀತಿ 1906ರಲ್ಲಿ ಎ. ಸುಬ್ಬರಾವ್ ಪೈ ಕೆನರಾ ಬ್ಯಾಂಕ್ ಸ್ಥಾಪನೆ ಮಾಡಿದರು. 1924ರಲ್ಲಿ ಬಿ.ಆರ್. ವ್ಯಾಸರಾಯಾಚಾರ್ ಎನ್ನುವವರು ಕರ್ನಾಟಕ ಬ್ಯಾಂಕ್ ಸ್ಥಾಪನೆ ಮಾಡಿದರು. ಈ ಎಲ್ಲಾ ಬ್ಯಾಂಕ್‌ಗಳು ಕರಾವಳಿ ಪ್ರದೇಶದಿಂದ ಸ್ಥಾಪನೆಗೊಂಡಿವೆ. ಈ ಜನರ ಕೈಯಲ್ಲಿ ಇಂದು ಸಣ್ಣ ಕೈಗಾರಿಕೆ ಮತ್ತು ಹೋಟೆಲ್ ಉದ್ಯಮವಿವೆ. ಹಿಂದೆ ಬ್ಯಾಂಕ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯವರೇ ಹೆಚ್ಚಾಗಿ ಉದ್ಯೋಗ ಪಡೆಯುತ್ತಿದ್ದರು. ಬ್ಯಾಂಕ್ ರಾಷ್ಟ್ರೀಕರಣವಾದ ನಂತರ ಇವರ ಪ್ರಭಾವ ಕಡಿಮೆಯಾಯಿತು. ಆದರೂ ಬ್ಯಾಂಕಿನ ದೊಡ್ಡ ಹುದ್ದೆಗಳಲ್ಲಿ ಅವರೇ ಇಂದಿಗೂ ಇದ್ದಾರೆ.

**ನಮಗೂ ಛಾನ್ಸ್ ಇತ್ತು**

ಹಾಲುಮತದ ಸಮುದಾಯಕ್ಕೂ ಇಂತಹ ಅವಕಾಶವಿತ್ತು. ನಮ್ಮ ಸಮಾಜದ ಮುಖಂಡರ ನಿಷ್ಕ್ರಿಯತೆಯಿಂದ ಇಂದು ನಾವು ಈ ಮಟ್ಟದಲ್ಲಿದ್ದೇವೆ. ಇಡೀ ರಾಷ್ಟ್ರದಲ್ಲಿ ಮೊದಲು ಸಹಕಾರ ಸಂಸ್ಥೆ ಸ್ಥಾಪಿಸಿದ ಎಸ್.ಎಸ್. ಪಾಟೀಲ್ ನಮ್ಮವರು. 1904ರಲ್ಲಿಯೇ ಅವರು ಧಾರವಾಡ ಜಿಲ್ಲೆಯಲ್ಲಿ ಕೃಷಿ ಪತ್ತಿನ ಸಹಕಾರ ಸಂಸ್ಥೆ ಸ್ಥಾಪಿಸಿದ್ದರು. ಅನಂತರ ನಮ್ಮ ಸಮಾಜ ಅದರ ಪ್ರಯೋಜನವನ್ನು ಪಡೆಯಲಿಲ್ಲ. ತುಮಕೂರಿನ ಗ್ರೈನ್ ಮರ್ಚೆಂಟ್ ಬ್ಯಾಂಕ್ ಸಹಕಾರ ತತ್ವದ ಮೇಲೆ ಸ್ಥಾಪಿತವಾಗಿದೆ. ಮೂರು–ನಾಲ್ಕು ಜಿಲ್ಲೆಯಲ್ಲಿ ಹಲವಾರು ಶಾಖೆಗಳನ್ನು ಹೊಂದಿದೆ. ವೀರಶೈವ ಸಮುದಾಯದ ಉದ್ಯಮಿಗಳಿಗೆ ಅದರಿಂದ ಅಪಾರವಾದ ನೆರವು ದೊರಕಿದೆ. ನಮ್ಮ ಸಮಾಜದ ಕಾಳಿದಾಸ ಸಹಕಾರ ಬ್ಯಾಂಕ್ ಬೆಳೆಯಲೇ ಇಲ್ಲ. ನಾವು ತುಮಕೂರಿನಲ್ಲಿ ಕನಕ ಪತ್ತಿನ ಸಹಕಾರ ಬ್ಯಾಂಕನ್ನು ಕಷ್ಟಪಟ್ಟು ಕಟ್ಟುತ್ತಿದ್ದೇವೆ. ಇದಕ್ಕೆ ಸಮುದಾಯದ ನಾಯಕರ ಸಹಾಯವಿಲ್ಲ ಬದಲಿಗೆ ಕಷ್ಟ ಕೊಡಲು ತುದಿಗಾಲ ಮೇಲೆ ನಿಂತಿರುತ್ತಾರುತ್ತಾರೆ.

**ಉದ್ಯಮಶೀಲರಾಗಲು ಅರ್ಹತೆ ಏನು?**

ನಾನು ಈ ಪೀಠಿಕೆ ಮಾತುಗಳನ್ನು ಹೇಳಲು ಮುಖ್ಯಕಾರಣ ಯಾವುದೇ ಸಮುದಾಯದಲ್ಲಿ ಉದ್ಯಮಶೀಲತೆ ಬೆಳೆಯಬೇಕಾದರೆ ಆರ್ಥಿಕ ಶಕ್ತಿಯನ್ನು ಆ ಸಮುದಾಯಕ್ಕೆ ಕೊಡಬೇಕು. ನಾವು ಶಿಕ್ಷಣ ಸಂಸ್ಥೆಯನ್ನು ಬೆಳೆಸುವಾಗ ಸಮುದಾಯಕ್ಕೆ ಆರ್ಥಿಕಶಕ್ತಿ ಮತ್ತು ಸಂಘಟನೆ ಎಷ್ಟು ಮುಖ್ಯ ಎನ್ನುವುದು ತಿಳಿಯಿತು. ನಮಗೆ ಕಷ್ಟಕಾಲದಲ್ಲಿ ಸಮುದಾಯದ ಸಂಸ್ಥೆಗಳು ಆರ್ಥಿಕ ಸಹಾಯ ಮಾಡಲು ಸಾಧ್ಯವಾಗಲಿಲ್ಲ. ಅವರನ್ನು ದೂರುವುದಿಲ್ಲ. ಅವರಲ್ಲಿ ಅಂತಹ ಶಕ್ತಿ ಇರಲಿಲ್ಲ. ಸಮುದಾಯದ ನಾಯಕರು ಸಣ್ಣ ಮನಸ್ಸಿನವರಾದ ಕಾರಣ ನಮಗೆ ಸಹಾಯ ಸಿಗಲಿಲ್ಲ. ಇಂತಹ ಸಂದರ್ಭದಲ್ಲಿ ಉದ್ಯಮಶೀಲತೆ ಬೆಳೆಯಲು ಮೊದಲು ಅದಕ್ಕೆ ಬೇಕಾದ ಭೂಮಿಕೆಯನ್ನು ಸಿದ್ಧಮಾಡಿಕೊಳ್ಳಿ ಎನ್ನುವುದು ನನ್ನ ಮನವಿ. ಯಾವುದೇ ಸಮುದಾಯಕ್ಕೆ ಉದ್ಯಮಕ್ಷೇತ್ರಕ್ಕೆ ಬರಲು ಎರಡು ವಿಚಾರಗಳು ಮುಖ್ಯ. ಮೊದಲನೆಯದು ಹಣಕಾಸು ಅಂದರೆ ಸಂಪನ್ಮೂಲ. ಎರಡನೆಯದು ತಂತ್ರಜ್ಞಾನದ ಶಕ್ತಿ.

**ಸಂಕಲ್ಪಶಕ್ತಿ ಮುಖ್ಯ**

ಇಂದು ಪ್ರಧಾನಮಂತ್ರಿಗಳಿಂದ ಹಿಡಿದು ನಗರಸಭಾ ಸದಸ್ಯರ ತನಕ ಎಲ್ಲರೂ ಸರ್ಕಾರವು ಯುವಜನಾಂಗಕ್ಕೆ ಉದ್ಯೋಗ ಸ್ಥಾಪಿಸಲು ಸಹಾಯ ಮಾಡುತ್ತದೆ ಎಂಬ ಘೋಷಣೆಯನ್ನು ಮಾಡುತ್ತಾರೆ. ಬ್ಯಾಂಕ್ ಅಥವಾ ಯಾವುದೇ ಹಣಕಾಸು ನೆರವು ಪಡೆಯಲು ಸಾಮಾನ್ಯರಿಗೆ ಸಾಧ್ಯವೇ ಇಲ್ಲ. ಇಂಜನಿಯರಿಂಗ್ ಕಾಲೇಜಿನಿಂದ ಬಂದ ಅನೇಕರು ಉತ್ಸಾಹದಿಂದ ಹೊಸ ಉದ್ಯಮ ಸ್ಥಾಪನೆಗೆ ಹೋಗಿ ನಿರಾಸೆ ಅನುಭವಿಸಿದ್ದಾರೆ. ಯಶಸ್ಸು ಆದವರು ಯಾರು ಇಲ್ಲವೆಂದು ಅರ್ಥವಲ್ಲ. ಹೊಸತನಕ್ಕೆ ಭಾರತೀಯ ಸಮಾಜ ಅಷ್ಟಾಗಿ ಸ್ಪಂದಿಸುವುದಿಲ್ಲ.

ಬಹುತೇಕ ತಂದೆ, ತಾಯಿಗಳು ತಮ್ಮ ಮಕ್ಕಳನ್ನು ಅಲ್ಪ ಸಂಬಳವಾದರೂ ಸರಿ ಯಾವುದಾದರೂ ಕೆಲಸ ಮಾಡು ಎನ್ನುತ್ತಾರೆ ಇದನ್ನು ಮೀರಿ ಹಾಲುಮತ ಸಮಾಜದ ಯುವಜನಾಂಗ ಬೆಳೆಯಬೇಕಾಗಿದೆ. ಅದೇನೂ ಕಷ್ಟವಲ್ಲ. ನಮ್ಮ ಸಮುದಾಯದ ಜನರ ಮನಸ್ಸಿನಲ್ಲಿ ಉದ್ಯಮವು ನಮ್ಮ ಸಮುದಾಯಕ್ಕೆ ಆಗಿ ಬಂದಿಲ್ಲ ಎನ್ನುವ ಭಾವನೆಯಿದೆ. ಈ ಮಾತು ಸುಳ್ಳು. ನಾವು ಪಶುಪಾಲನೆಯ ಜೊತೆಗೆ ಉದ್ಯಮವನ್ನು ಮಾಡಿದ್ದೇವೆ. ಬಳ್ಳಾರಿಯಲ್ಲಿ ನಮ್ಮ ಸಮುದಾಯದ ಅನೇಕರು ಚಿನ್ನ ಬೆಳ್ಳಿ ವ್ಯಾಪಾರ ಮಾಡುತ್ತಾರೆ. ಇದನ್ನು ಅನೇಕ ತಲೆಮಾರಿನಿಂದ ಮಾಡಿಕೊಂಡು ಬಂದಿದ್ದಾರೆ. ಉದ್ಯಮಶೀಲತೆಗೂ ಮತ್ತು ಜಾತಿಗೂ ಸಂಬಂಧವಿಲ್ಲ. ಹಿಂದೆ ಈಡಿಗ ಸಮುದಾಯ ಮಾತ್ರ ಅಬಕಾರಿ ಉದ್ಯಮ ನಡೆಸುತ್ತಿದ್ದರು. ಇಂದು ಎಲ್ಲಾ ಸಮುದಾಯದವರು ಈ ಉದ್ಯಮದಲ್ಲಿದ್ದಾರೆ. ಅದೇ ರೀತಿ ದಕ್ಷಿಣಕನ್ನಡ ಜಿಲ್ಲೆಯ ಬಿಲ್ಲವ ಸಮುದಾಯ ಹೋಟೆಲ್ ಉದ್ಯಮದಲ್ಲಿ ಗಣನೀಯ ಪಾತ್ರ ವಹಿಸುತ್ತಿದ್ದಾರೆ. ಇನ್ನು ಬಾಂಬೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ಸ್ ಮತ್ತು ಬಿಲ್ಲವರು ಹೋಟೆಲ್ ಉದ್ಯಮ ಕ್ಷೇತ್ರವನ್ನು ತಮ್ಮ ಹತೋಟಿಯಲ್ಲಿಟ್ಟು ಕೊಂಡಿದ್ದಾರೆ. ಇದಕ್ಕೆ ಕಾರಣ ನಾನು ಮೊದಲೇ ಹೇಳಿದಂತೆ ಹಣಕಾಸು ಸಂಸ್ಥೆಗಳು, ಅವರಿಗೆ ನೀಡಿದ ನೆರವು ಎಂಬುದನ್ನು ಯಾರು ಮರೆಯಬಾರದು.

**ಭಾರತದಲ್ಲಿ ಉದ್ಯಮ**

ಇಂದು ಇಡೀ ಭಾರತದ ಉದ್ಯಮ ಯಾರ ಕೈಯಲ್ಲಿದೆ. ಮಹಾರಾಷ್ಟ್ರದಲ್ಲಿ ಮರಾಠರು ದೊಡ್ಡ ಸಂಖ್ಯೆಯಲ್ಲಿರಬಹುದು. ಅವರನ್ನು ನಿಯಂತ್ರಿಸುವವರು ಗುಜರಾತ್‌ನ ಉದ್ಯಮಿಗಳು. ಅಂಬಾನಿ ಹಾಗೂ ಅದಾನಿ ಎಷ್ಟು ಬಲಶಾಲಿಗಳು ಎನ್ನುವುದನ್ನು ಊಹಿಸಲೂ ಸಾಧ್ಯವಿಲ್ಲ. ಯಾರೇ ಅಧಿಕಾರಕ್ಕೆ ಬಂದರೂ ಅವರ ಕೃಪೆಯಿಂದಲೇ ಸರ್ಕಾರ ನಡೆಸಬೇಕು. ಅದೇ ರೀತಿ ರಾಜಸ್ಥಾನದ ಮಾರವಾಡಿಗಳು, ಅವರು ಏಕಾಂಗಿಗಳೂ ಹೌದು ಸಂಘಟಿತರೂ ಹೌದು. ಕರ್ನಾಟಕದಲ್ಲಿ ಅವರು ಮೊದಲು ಪೇಪರ್, ಆಯಿಲ್, ಸಕ್ಕರೆ, ತಂಬಾಕು ಮೊದಲಾದ ಸಗಟು ವ್ಯಾಪಾರದಲ್ಲಿದ್ದರು. ಇಂದು ಚಿಲ್ಲರೆ ಅಂಗಡಿಯ ವ್ಯಾಪಾರಲ್ಲೂ ಮಾರವಾಡಿಗಳಿದ್ದಾರೆ. ಕೊಳ್ಳೇಗಾಲದಲ್ಲಿ ಅವರ ದಿನಸಿ ಅಂಗಡಿಯಿರುತ್ತದೆ. ಭಾಷೆ ಗೊತ್ತಿಲ್ಲದಿದ್ದರೂ ವ್ಯಾಪಾರದಲ್ಲಿ ಅವರು ಯಶಸ್ವಿಯಾಗಿದ್ದಾರೆ. ಮೊಬೈಲ್ ಮೊದಲಾದ ಎಲೆಕ್ಟ್ರಾನಿಕ್ ಉಪಕರಣದಲ್ಲಿ ಅವರದು ಏಕ ಸ್ವಾಮ್ಯ. ಅವರು ಎಂದು ಸ್ಥಳೀಯ ಬ್ಯಾಂಕ್‌ಗಳನ್ನು ಅವಲಂಬಿಸುವುದಿಲ್ಲ. ತಮ್ಮ ರಾಜ್ಯದ ಹಣಕಾಸು ಸಂಸ್ಥೆಯನ್ನೇ ಅವರು ಅವಲಂಬಿಸಿದ್ದಾರೆ.

**ಇಸ್ರೇಲ್ ಉದಯಕ್ಕೆ ಕಾರಣ**

ಉದ್ಯಮಶೀಲತೆಗೆ ಹಣಕಾಸು ಮುಖ್ಯ ಎನ್ನುವುದು ರಾಜ್ಯ ಮತ್ತು ರಾಷ್ಟ್ರದ ಸಮಸ್ಯೆ ಮಾತ್ರವಲ್ಲ. ಅಂತಾರಾಷ್ಟ್ರೀಯ ಮಟ್ಟದಲ್ಲೂ ಹಣಕಾಸಿನ ಸೌಲಭ್ಯವುಳ್ಳ ಸಮುದಾಯಗಳು ಪವಾಡಗಳನ್ನೇ ಮಾಡಿವೆ. ಉದಾಹರಣೆಗೆ ಹೇಳುವುದಾದರೆ ಇಂದಿನ ಇಸ್ರೇಲ್ ವಿಚಾರ ನಿಮಗೆಲ್ಲಾ ಗೊತ್ತಿದೆ. ಪ್ಯಾಲೆಸ್ತೀನ್‌ರಿಗೂ ಯಹೂದಿಗಳಿಗೂ ನಿರಂತರವಾಗಿ ಯುದ್ಧ ನಡೆಯುತ್ತಿದೆ. ಯಹೂದಿಗಳನ್ನು Jewish Community ಎನ್ನುತ್ತಾರೆ. ಈ ಯಹೂದಿಗಳಿಗೆ 1948 ಮೇ 14ರಂದು ವಿಶ್ವಸಂಸ್ಥೆ ಇಸ್ರೇಲ್‌ನ್ನು ನೀಡಿತು. ಅದಕ್ಕೆ ಪೂರ್ವದಲ್ಲಿ 1917ರಲ್ಲಿ ಬ್ರಿಟಿಷ್ ಪ್ರಧಾನಿ ಡೇವಿಡ್ ಲಾಯ್ಡ್ ಜಾರ್ಜ್ (1916–22) "Jewish Communityಯ Rothschilas ಎನ್ನುವ ಶ್ರೀಮಂತ, ಬ್ಯಾಂಕರ್ ಕುಟುಂಬದ ಯಹೂದಿಗಳಿಗೆ ಇಂಗ್ಲೆಂಡ್ ಮಾತೃಭೂಮಿಯನ್ನು ನಿರ್ಮಿಸಿ ಕೊಡುತ್ತದೆ" ಎಂದು ಬರಹದಲ್ಲಿ ಕೊಟ್ಟಿರುತ್ತಾನೆ. ಈ ಬಗ್ಗೆ ಒಪ್ಪಂದವಾಗಿರುತ್ತದೆ. ಮೊದಲ ಮಹಾಯುದ್ಧದಲ್ಲಿ ಅಟೋಮನ್ ಸಾಮ್ರಾಜ್ಯ ನಾಶವಾದ ಮೇಲೆ ಅದರ ಪ್ರಯೋಜನವನ್ನು ಗರಿಷ್ಠ ಮಟ್ಟದಲ್ಲಿ ಪಡೆದವರು ಯಹೂದಿಗಳು. ಇದಕ್ಕೆ ಕಾರಣ The Rothschilas ಕುಟುಂಬ. ಇಂಗ್ಲೆಂಡ್ ಸರ್ಕಾರಕ್ಕೆ ಮೊದಲ ಮಹಾ ಯುದ್ಧದ ಸಮಯದಲ್ಲಿ ಸಾಲ ಕೊಟ್ಟಿರುತ್ತದೆ. ಸಾಲದ ಷರತ್ತುಗಳಲ್ಲಿ ಯಹೂದಿಗಳಿಗೆ ಮಾತೃಭೂಮಿಯನ್ನು ಇಂಗ್ಲೆಂಡ್ ನಿರ್ಮಿಸಿಕೊಡಬೇಕು ಎನ್ನುವುದಿತ್ತು. ಯಹೂದಿ ಸಮುದಾಯದ ಬ್ಯಾಂಕರ್‌ಗಳು ಜರ್ಮನಿಯ ಸರ್ಕಾರಕ್ಕೂ ಸಾಲ ಕೊಟ್ಟದ್ದರು. Rothschilas ಕುಟುಂಬ ಎಂತಹ ದೂರದೃಷ್ಟಿಯುಳ್ಳವರು ಎಂದರೆ ಇಂಗ್ಲೆಂಡ್ ಜೊತೆ ಒಪ್ಪಂದವಾದ ಮೇಲೆ ಇಸ್ರೇಲ್‌ನಲ್ಲಿ 1.50ಲಕ್ಷ ಹೆಕ್ಟೇರ್ ಭೂಮಿಯನ್ನು ಕೊಂಡು ವಿಶ್ವದ ಎಲ್ಲಾ ಯಹೂದಿಗಳನ್ನೂ ಅಲ್ಲಿಗೆ ಬರುವಂತೆ ಮಾಡುತ್ತಾರೆ.

**ಸಮುದಾಯದ ಪಾತ್ರ**

ನಾನು ಈ ಘಟನೆಯನ್ನು ಪ್ರಸ್ತಾಪಿಸಲು ಮುಖ್ಯಕಾರಣ ಎರಡು. ನಮ್ಮ ಸಮುದಾಯವು ಹಣಕಾಸು ಸಂಸ್ಥೆಗಳನ್ನು ಸ್ಥಾಪಿಸಿ ನಮ್ಮ ಜನಾಂಗದ ಯುವಕ/ಯುವತಿಯರಿಗೆ ಉದ್ಯಮ ಸ್ಥಾಪಿಸಲು ಪ್ರೇರಣೆ ನೀಡಬೇಕು. ಅದು ತನ್ನ ಗಮನವನ್ನು ಕೇವಲ ರಾಜಕೀಯ ವಿಚಾರಗಳಿಗೆ ಪ್ರಾಮುಖ್ಯವನ್ನು ಕೊಡದೆ ಸಮುದಾಯದ ಆರ್ಥಿಕಶಕ್ತಿ ವೃದ್ಧಿಯಾಗುವ ಕಡೆಗೂ ಗಮನ ಕೊಡಬೇಕು. ಇಂದಿಗೂ ನಮ್ಮ ಸಮುದಾಯಕ್ಕೆ ಉದ್ಯಮಕ್ಷೇತ್ರದಲ್ಲಿ ಯಶಸ್ವಿಯಾಗುವ ಎಲ್ಲಾ ಅರ್ಹತೆ ಇದೆ. ಇದು ಸಕಾಲ. ಮುಂದಿನ ದಿನಗಳಲ್ಲಿ ಮತ್ತಷ್ಟು ಹೊಸ ಅವಕಾಶಗಳು ದೊರೆಯುತ್ತವೆ. ನಮ್ಮ ಸಮುದಾಯದ ಯುವಜನಾಂಗ ಉದ್ಯಮಿಗಳಾಗಲು ಬೇಕಾಗುವ ಅರ್ಹತೆ ಪಡೆಯಬೇಕು. ತಾಂತ್ರಿಕವಾಗಿ ನಾವು ಹೆಚ್ಚು ಪರಿಪೂರ್ಣರಾಗಬೇಕು. ಕಷ್ಟಪಟ್ಟು ದುಡಿಯುವ ಮನೋಧರ್ಮ ಬೆಳೆಸಿಕೊಳ್ಳಬೇಕು. ಜಗತ್ತಿನಲ್ಲಿ ಯಾವ ಸಮುದಾಯ ಸರ್ಕಾರದ ನೆರವು ಪಡೆಯದೇ ಸ್ವಾವಲಂಬಿಯಾಗಿರುತ್ತದೋ ಅವರನ್ನು ಯಾರೂ ಏನೂ ಮಾಡಲು ಸಾಧ್ಯವಿಲ್ಲ. ಇನ್ನು ಮುಂದೆ ಸರ್ಕಾರ ಕೇವಲ ಆಡಳಿತಕ್ಕೆ ಸೀಮಿತಗೊಳ್ಳುತ್ತದೆ. ಅಭಿವೃದ್ಧಿಗೆ ಸಂಬಂಧಪಟ್ಟ ಎಲ್ಲವೂ ಖಾಸಗಿವಲಯದಲ್ಲಿರುತ್ತದೆ. ಇಂತಹ ವ್ಯವಸ್ಥೆಗೆ ನಾವು ಅಣಿಯಾದರೆ ನಮಗೂ ಅದರಲ್ಲಿ ಪಾಲಿರುತ್ತದೆ, ಇಲ್ಲದಿದ್ದರೆ ನಾವು ಕೇವಲ ದಿನಗೂಲಿ ನೌಕರರಾಗಿಬಿಡುತ್ತವೆ."

■ ನಿರೂಪಣೆ: ಶ್ರೀವತ್ಸ

Printed and Published by Shridevi Media Center, Lingapura, NH 4, Sira Road, Tumakuru - 572106, Mob: 94480 82844 and Printed at Maruthi Printing Press, No.90/6-1. 1st cross, Vittal Nagar West, Near Marvel Apartment, Bengaluru-560026. Editor: Dr M R Hulinaykar